ಓಂ

- ಶ್ರೀಮತೇ ನಮಃ -

ನಾಲಾಯಿರ ದಿವ್ಯ ಪ್ರಬಂಧಮ್

।

ಮುದಲಾಯಿರಂ

।

ಪುಟಗಳು

(a) ತಿರುಮಾಲೈ - ತೊಂಡರಡಿಪ್ಪೊಡಿ ಆಳ್ವಾರ್ 11-54
(b) ತಿರುಪ್ಪಳ್ಳಿಯೆಳುಚ್ಚಿ - ತೊಂಡರಡಿಪ್ಪೊಡಿ ಆಳ್ವಾರ್ 55-72
(c) ಅಮಲನಾದಿಪಿರಾನ್ - ತಿರುಪ್ಪಾಣಾಳ್ವಾರ್ 73-87
(d) ಕಣ್ಣಿನುಣ್ ಶಿರುತ್ತಾಂಬು - ಮಧುರಕವಿ ಆಳ್ವಾರ್ 88-102

ಮೊದಲನೆಯ ಸಾವಿರ

ತಮಿಳು ಮೂಲ ಕನ್ನಡದಲ್ಲಿ ಪ್ರತಿಪದಾರ್ಥ ತಾತ್ಪರ್ಯ
ಮತ್ತು
ವಿವರಣೆಯೊಂದಿಗೆ

ಸಂಪುಟ - 6

— ಶ್ರೀಃ —

— ಶ್ರೀಯೈ ನಮಃ —

— ಕಣ್ಣಿನುಣ್ ಶಿರುತ್ತಾಂಬು —

— கண்ணிநுண் சிறுத்தாம்பு —

(ಮಧುರ ಕವಿ ಆಳ್ವಾರರ ವಿರಚಿತ)

(ತಮಿಳಿನಲ್ಲಿ ಮೂಲ, ಕನ್ನಡದಲ್ಲಿ ಪ್ರತಿಪದಾರ್ಥ, ತಾತ್ಪರ್ಯ, ಮತ್ತು ವಿವರಣೆಯೊಡನೆ)

- ಶ್ರೀಃ - - ಶ್ರೀಯೈನಮಃ -

ಕಣ್ಣಿನುಣ್ ಶಿರುತ್ತಾಂಬು - கண்ணிநுண் சிறுத்தாம்பு.

(ಮಧುರಕವಿ ಆಳ್ವಾರರ ವಿರಚಿತ)

ತನಿಗಳು - தனியன்கள்

1. ಅವಿದಿತ ವಿಷಯಾನ್ತರಶ್ಶಠಾರೇ ರುಪನಿಷದಾಮುಪಗಾನ ಮಾತ್ರ ಭೋಗಃ।
ಅಪಿ ಚ ಗುಣವಶಾತ್ತದೇಕ ಶೇಷೀ ಮಧುರಕವಿರ್ಹೃದಯೇ ಮಮಾವಿರಸ್ತು॥

ಶಠಾರೇಃ = ಶಠಾರಿಯು ಹೊರತು, ವಿಷಯಾನ್ತರಃ = ಬೇರೆ ವಿಷಯವನ್ನು, ಅವಿದಿತ = ತಿಳಿಯದೆ ಇರುವ, ಉಪನಿಷದಾಂ = ಉಪನಿಷತ್ತುಗಳನ್ನು, ಉಪಗಾನಮಾತ್ರಭೋಗಃ = ಹಾಡುವುದರಲ್ಲಿ ಮಾತ್ರವೇ ಆನಂದಿಸುವ, ಅಪಿ, ಚ = ಮತ್ತು, ಗುಣವಶಾತ್ = ಸದ್ಗುಣಗಳ ದೆಸೆಯಿಂದ, ತದೇಕಃ = ಅವನೊಬ್ಬನನ್ನೇ, ಶೇಷೀ = ಆಶ್ರಯಣೀಯನಾಗಿ ಉಳ್ಳವನಾದ, ಮಧುರಕವಿಃ = ಮಧುರಕವಿಯು, ಮಮ ಹೃದಯೇ = ನನ್ನ ಚಿತ್ತದಲ್ಲಿ, ಆವಿರಸ್ತು = ಪ್ರಕಾಶಿಸುತ್ತಿರಲಿ.

ಶಠಾರಿಯು ಹೊರತು ಬೇರೆ ಯಾವ ವಿಷಯವನ್ನು ಕುರಿತು ಯೋಚನೆಯನ್ನರಿಯದ, ಉಪನಿಷತ್ತುಗಳನ್ನು ಹಾಡುವುದರಲ್ಲಿಯೇ ಆನಂದಿಸುವ, ಮತ್ತು ಸದ್ಗುಣಗಳ ಕಾರಣವಾಗಿ ಅವನೊಬ್ಬನನ್ನೇ ಆಶ್ರಯಿಸಿದ ಮಧುರಕವಿಯು ನನ್ನ ಚಿತ್ತದಲ್ಲಿ ಪ್ರಕಾಶಿಸುತ್ತಿರಲಿ. ①

ಈ ಸುಂದರವಾದ ತನಿಯನ್ನು ನಾಥಮುನಿಗಳು ಕರುಣಿಸಿದ್ದು. ಇಲ್ಲಿ ಹೇಳಿರುವ 'ಶಠಾರಿ' ಅಥವಾ 'ಗುರುವಿನ ಪಾದಗಳು' ಎಂಬುದನ್ನು ಎರಡು ರೀತಿಯಲ್ಲಿ ವಿವರಿಸಬಹುದೆನಿಸುತ್ತದೆ. ಭಗವಂತನೇ ಪರಮಗುರುವಾದ್ದರಿಂದ ಅವನ ಪಾದಗಳು 'ಶಠಾರಿ'. ಮತ್ತು, ಭೂಲೋಕದಲ್ಲಿ ಪ್ರತ್ಯಕ್ಷ ಗುರುವಿನ ರೂಪದಲ್ಲಿ, ಭಗವಂತನ ಅನನ್ಯ ಭಕ್ತನಿದ್ದಾನೆ. ಆ ಗುರುವಿನ ~~ಅವನ~~ ಪಾದಗಳು 'ಶಠಾರಿ'ಯೇ.

ಭಗವಂತನನ್ನು ಪರಮಗುರುವನ್ನಾಗಿ, ಪರಮಪ್ರಾಪ್ಯನನ್ನಾಗಿ ನಂಬಿ, ಅವನ ಪಾದಗಳನ್ನು ಹಿಡಿದು, ಅವನ ಕಲ್ಯಾಣಗುಣಗಳನ್ನರಿತು ಅವನ್ನಾಶ್ರಯಿಸಿ ಸೇವೆ ಮಾಡಿದ ಹೊರತು ಮನುಷ್ಯನಿಗೆ ಮುಕ್ತಿಯಿಲ್ಲ. ಈ ತತ್ತ್ವಾಂಶವನ್ನರಿತು, ಹಾಗೆಯೇ ಅಭ್ಯಾಸಮಾಡಿ, ಗುರಿಯನ್ನು ಸಾಧಿಸಿಕೊಂಡವರು ಆಳ್ವಾರರು. ಅವರಲ್ಲಿ ಶಠಗೋಪರು ಅಗ್ರಗಣ್ಯರು. ಅವರು ಜ್ಞಾನಸಂಪನ್ನರು ಮತ್ತು ಗುಣಸಂಪನ್ನರು. ಅವರಿಗೆ ಭಗವಂತನೇ ಸರ್ವಸ್ವ. "ಉಣ್ಣುವ ಉಣಿಸು, ಕುಡಿಯುವ ನೀರು, ಮೆಲ್ಲುವ 'ವೀಳೆಯ', ಎಲ್ಲವೂ ಕೃಷ್ಣನೇ" ಎಂದು ಅವರ ಮಾತು. ಭಗವದ್ವಿಷಯವಲ್ಲದೆ ಬೇರೇನೂ ಅವರಿಗೆ ತಿಳಿಯದು. ಅವರು ಅಧ್ಯಯನ ಮಾಡಿದ್ದು ಸದಾ ಭಗವದ್ವಿಷಯವನ್ನೇ - ವೇದೋಪನಿಷತ್ತುಗಳನ್ನೇ. ಹೀಗೆ ಶಠಗೋಪರು ಭಗವಂತನ ಉಸಿರಾಗಿಯೇ ತಮ್ಮ ಬಾಳನ್ನು ನಡೆಸಿದರು.

ಭಗವಂತನ ಅನನ್ಯ ಕಿಂಕರರಾದ ಶಠಗೋಪರನ್ನೇ ತಮ್ಮ ಗುರುವನ್ನಾಗಿ ಮಾಡಿಕೊಂಡು, ಅವರಲ್ಲಿ ಅನನ್ಯ ಭಕ್ತಿಯನ್ನಿಟ್ಟು, ಅವರ ಗುಣಗಾನ ಮಾಡುತ್ತಾ, ಅವರ ಸಂಗದಲ್ಲಿಯೇ ನಡೆದು ಮುಕ್ತರಾದವರು ಮಧುರಕವಿ. ಅವರಿಗೆ, ಶಠಗೋಪರ ಪಾದಗಳೇ 'ಶಠಾರಿ'. ಶಠಗೋಪರು ರಚಿಸಿದ ದ್ರಾವಿಡ ವೇದೋಪನಿಷತ್ತುಗಳನ್ನು ಹಾಡಿ ಹಾಡಿ ಆನಂದಿಸುವುದರಲ್ಲಿಯೇ ಅವರಿಗೆ ಆಸಕ್ತಿ. ಬೇರಾವ ಆಸಕ್ತಿಯೂ ಅವರಿಗಿಲ್ಲ. ಭಗವನ್ನಿಷ್ಠೆಯಲ್ಲಿಯೇ ಮಗ್ನರಾಗಿ ತಮ್ಮ ಬಾಳನ್ನು ನಡೆಸಿ ಮುಕ್ತರಾದ ಶಠಗೋಪರ ಹಾಗೆಯೇ ಅನನ್ಯವಾದ ಗುರುನಿಷ್ಠೆಯಲ್ಲಿಯೇ ತಲ್ಲೀನರಾಗಿ ಬಾಳನ್ನು ನಡೆಸಿದವರು ಮಧುರಕವಿ.

ಆದ್ದರಿಂದ, ಶಠಾರಿಯು ಆಶ್ರಯಣವೆಂದರೆ ಭಗವಂತನ ಪಾದಗಳಲ್ಲಿಯೇ ನಿಷ್ಠೆ ಅಥವಾ ಭಗವತ್[illegible]ವನ್ನು ಮಾಡಿರುವ ಸದ್ಗುರುವಿನ ಪಾದಗಳಲ್ಲಿಯೇ ನಿಷ್ಠೆ.

ಪ್ರವೃತ್ತಿ ಶಾಸ್ತ್ರದ ಒಂದು ಭಾಗವಾದ 'ಸ್ತೋತ್ರವರಣಮ್' ಎಂಬುದನ್ನು ಈ ತನಿಯಲ್ಲಿ ಹೇಳಲಾಗಿದೆ. ಆತ್ಮನು ಪರಮಾತ್ಮನಲ್ಲಿ ಅನನ್ಯವಾದ ಶರಣು ಹೊಂದುವುದೇ ಇದಕ್ಕೆ ಮೂಲ. ಭಗವಂತನೇ ರಕ್ಷಕನೆಂದು ನಂಬುವುದು, ರಕ್ಷಣೆಯ ಭಾರವನ್ನು [illegible] ವಹಿಸುವುದು, ಮತ್ತು ದಾಸಿಯೇ ನಡೆದು ತೋರುವುದು ಇದು. 'ಆಚಾರ್ಯ ಅಭಿಮಾನ' ಅಥವಾ ಗುರುಪೂಜೆಯ ಶಕ್ತಿ ಈ ಸ್ತೋತ್ರವರಣದ ಒಂದು ಬಳಕೆಯ ರೀತಿ ಮಾತ್ರವೇ. ಆದರೆ, ಗುರುವನ್ನು ಆಶ್ರಯಿಸಿ, ಅನುಸಂಧಾನ ನಡೆಸುವುದು ಭಗವಂತನಲ್ಲಿ ಶರಣಾಗುವುದಕ್ಕಿಂತಲೂ (ಪ್ರಪತ್ತಿಗಿಂತಲೂ) ಒಂದು ಕೈ ಹೆಚ್ಚೆಂದು ಕೆಲವರ ಮತ. ಗುರುಭಕ್ತಿಗೆ ಕೊಟ್ಟಿರುವ ಮಹತ್ವ ಇದು. ಈ ಬಗೆಯ ಪ್ರಪತ್ತಿಗೆ ಮಧುರಕವಿ ಒಂದು ಉತ್ತಮ ನಿದರ್ಶನ, ಎಂಬುದನ್ನು ತನಿ ಹೇಳುತ್ತದೆ.

ಶಠಗೋಪನಿಗೆ 'ಶಠಾರಿ ಮುನಿ' ಎಂದೂ ಹೆಸರು. ಅವರೇ 'ಆದಿಗುರು'.

2. வேறொன்றும் நானறியேன் வேதந்தமிழ்செய்த
மாறன் சடகோபன் வண்குருகூர் – ஏறெங்கள்
வாழ்வாமென்றேத்தும் மதுரகவியாரெம்மை
ஆள்வாரவரே யரண்.

ವೇಱೊನ್ಱುಮ್ ನಾನಱಿಯೇನ್ ವೇದನ್ದಮಿೞ್ ಶೆಯ್ದ
ಮಾಱನ್ ಶಟಕೋಪನ್ ವಣ್ ಕುರುಕೂರ್ – ಏಱೆಙ್ಗಳ್
ವಾೞ್ವಾಮೆನ್ ಱೇತ್ತುಮ್ ಮದುರಕವಿಯಾರೆಮ್ಮೈ
ಆಳ್ವಾರವರೇ ಯರಣ್.

ವೇಱು வேறு = ಬೇರೆ, ಒನ್ಱುಮ್ ஒன்றும் = ಏನೊಂದನ್ನೂ, ನಾನ್ நான் = ನಾನು, ಅಱಿಯೇನ್ அறியேன் = ಅರಿಯಲಾರೆನು, ವೇದಮ್ வேதம் = ವೇದಗಳನ್ನು, ತಮಿೞ್ ಶೆಯ್ದ தமிழ் செய்த = ತಮಿಳು ಭಾಷೆಯಲ್ಲಿ ಕೃತಿ ಮಾಡಿದ, ಮಾಱನ್ மாறன் = ಮಾರನೆಂದು ಕರೆಯಲ್ಪಡುವ, ವಣ್ வண் = ಶೋಭನ, ಕುರುಕೂರ್ குருகூர் = ಕುರುಕೂರಿನ, ಏಱು ஏறு = ಶ್ರೇಷ್ಠನು (ವೃಷಭನು), ಶಟಕೋಪನ್ சடகோபன் = ಶಠಗೋಪನು, ಎಙ್ಗಳ್ எங்கள் = ನಮ್ಮ, ವಾೞ್ವು வாழ்வு = ಬಾಳು, ಆಮ್ ஆம் = ಉತ್ತಮ ಬಾಳಾಗುವುದು, ಎನ್ಱು என்று = ಎಂದು, ಏತ್ತುಮ್ ஏத்தும் = ಸ್ತೋತ್ರ ಮಾಡುವ, ಮದುರಕವಿಯಾರ್ மதுரகவியார் = ಮಧುರಕವಿಯು, ಎಮ್ಮೈ எம்மை = ನಮ್ಮನ್ನು, ಆಳ್ವಾರ್ ஆள்வார் = ಆಳುವವರೂ (ಒಡೆಯರು), ಅವರೇ அவரே = ಅವರೇ, ಅರಣ್ அரண் = ರಕ್ಷಕರು.

ಬೇರೆ ಏನೊಂದನ್ನೂ ನಾನು ಅರಿಯಲಾರೆನು (ಅರಿಯೆನು). ವೇದಗಳನ್ನು ತಮಿಳು ಭಾಷೆಯಲ್ಲಿ ಕೃತಿ ಮಾಡಿದ 'ಮಾರನ್' ಎಂಬ ಹೆಸರಿನ, ಶೋಭನ ಕುರುಕೂರಿನ ಪುರುಷವೃಷಭನು ಶಠಗೋಪನು. ನಮ್ಮ ಬಾಳು ಉತ್ತಮಗೊಳ್ಳುವುದೆಂದು ಸ್ತೋತ್ರ ಮಾಡುವ ಮಧುರಕವಿಯು ನಮ್ಮ ಒಡೆಯನು. ಅವರೇ ನಮ್ಮ ರಕ್ಷಕರು. ②

ಈ ತನಿಯು ನಾಥಮುನಿಗಳದು. ಅವರ ಮಾತು ತುಂಬ ಸೊಗಸಾಗಿ ಅರ್ಥಪೂರ್ಣವಾಗಿದೆ.

ನಾಥಮುನಿಗಳು ಹೇಳುತ್ತಾರೆ: ನನಗೆ ಬೇರೆ ಏನೂ ತಿಳಿಯದು. ಸಂಸ್ಕೃತದ ವೇದಗಳನ್ನು ತಮಿಳಿನಲ್ಲಿ ಸುಲಭವಾಗಿ ಅರ್ಥವಾಗುವಂತೆ [illegible] ಬರೆದಿರುವವರು ಶಠಗೋಪರು. ಪವಿತ್ರವಾದ ಕುರುಕೂರಿನಲ್ಲಿ ಶ್ರೇಷ್ಠ ಪುರುಷರೆನಿಸಿಕೊಂಡಿರುವವರು. ಅವರನ್ನು ಆಶ್ರಯಿಸಿ, ಅವರ ಸೇವೆ ಮಾಡಿ, ಅವರನ್ನು ಹೊಗಳಿ, ನಮಗೆಲ್ಲ ಮಾರ್ಗದರ್ಶಕರಾಗಿ ನಮ್ಮ ಮೇಲು ಕೋರಿ ಬಾಳಿದವರು ಮಧುರಕವಿ. ಅವರೇ ನಮಗೆ ಒಡೆಯರು. ಶಠಗೋಪರು ಅವರಿಗೆ ರಕ್ಷಕರು ಹೇಗೋ ಹಾಗೆಯೇ (ಮಧುರಕವಿ) ಅವರು ನಮಗೆ ರಕ್ಷಕರು.

ಭಕ್ತನ ಭಕ್ತನಾಗಿ ಸೇವೆಸಲ್ಲಿಸುವುದರಿಂದ ಅವನೂ ಉದ್ಧಾರಹೊಂದುವನು ಎಂಬುದು ಇಲ್ಲಿಯ ತತ್ತ್ವ. ಭಗವಂತನ ಭಕ್ತರು ಶಠಗೋಪರು. ಶಠಗೋಪರಿಗೆ ಸೇವಕರಾದವರು ಮಧುರಕವಿ. ಆ ಮಧುರಕವಿಯ ಸೇವಕರು ನಾವಾದರೆ, ಶಠಗೋಪರಂತೆ, ಮಧುರಕವಿಗಳಂತೆ, ನಾವೂ ಉಜ್ಜೀವನಹೊಂದುತ್ತೇವೆ. "ಸ್ವಾಮೀ, ನನ್ನನ್ನು ನಿನ್ನ ಭೃತ್ಯನ, ಭೃತ್ಯನ, ಪರಿಚಾರಕನ, ಭೃತ್ಯನ, ಭೃತ್ಯನ, ಭೃತ್ಯನನ್ನಾಗಿ ಮಾಡು" ಎಂದು ಬೇಡಲಿಲ್ಲವೇ, ಕುಲಶೇಖರರು? ಮಧುರಕವಿಯ ಹಿರಿಮೆಯನ್ನು ಈ ಪಾಶುರ ಹೇಳುತ್ತದೆ. ಗುರು-ಶಿಷ್ಯ ಸಂಬಂಧದ ಹಿರಿಮೆಯೂ ಇಲ್ಲಿದೆ.

ಶಠಗೋಪರಿಗೆ ಬಂದ ಬಿರುದು "ವೇದಮ್ ತಮಿಳ್ ಶೆಯ್ದ ಮಾರನ್" ಎಂಬುದು. ತಿಳಿಯಲು ಕಷ್ಟವಾದ ವೇದಗಳಲ್ಲಿ ಅಡಗಿರುವ ತತ್ತ್ವಗಳನ್ನು ಎಲ್ಲರೂ ಸುಲಭವಾಗಿ ತಿಳಿಯುವಂತೆ ಅದನ್ನು ತಮಿಳಿನಲ್ಲಿ ರಚಿಸಿದ್ದರಿಂದ ಈ ಕೀರ್ತಿ ಅವರಿಗೆ. ಶಠಗೋಪರು ಬರೆದಿರುವ 'ತಿರುವಿರುತ್ತಮ್' ಎಂಬುದು ಋಗ್ವೇದದ ಸಾರ, 'ತಿರುವಾಶಿರಿಯಮ್' ಎಂಬುದು ಯಜುರ್ವೇದದ ಸಾರ, 'ತಿರುವಾಯ್ಮೊಳಿ' ಎಂಬುದು ಸಾಮವೇದದ ಸಾರ, ಮತ್ತು 'ಪೆರಿಯ ತಿರುವಂದಾದಿ' ಎಂಬುದು 'ಅಥರ್ವವೇದದ ಸಾರ- ಎನ್ನುತ್ತಾರೆ.

ಶಠಗೋಪರು ಹುಟ್ಟಿದಾಗಿನಿಂದಲೂ ಅಳದೆ, ಹಾಲುಕುಡಿಯದೆ, ಇಹಲೋಕದ ಜ್ಞಾನವಿಲ್ಲದೆ, ಮಲಮೂತ್ರ ವಿಸರ್ಜನೆ ಮಾಡದೆ, ಪ್ರಾಪಂಚಿಕ ಜೀವನಕ್ಕೆ ವಿಮುಖರಾಗಿ ಬೆಳೆದರು. ಬೆಳೆಸಿದವರು ಇವರಿಗೆ 'ಮಾರನ್' ಎಂದು ನಾಮಕರಣ ಮಾಡಿದ್ದರು. ಗರ್ಭದಲ್ಲಿರುವಾಗಲೇ ಶಿಶುವಿಗೆ ಬಂದಿರುವ ಆತ್ಮಜ್ಞಾನವನ್ನು ಅದು ಭೂಸ್ಪರ್ಶ ಮಾಡಿದ ಕೂಡಲೇ, ಅದನ್ನೆಲ್ಲಾ ಮರೆಸುವ ಅಜ್ಞಾನಿಯನ್ನಾಗಿ ಮಾಡುವ 'ಶಠ' ಎಂಬ ವಾಯುವನ್ನು ಜಯಿಸಿದ ಪರಮಜ್ಞಾನಿಗಳಾದವರು ಇವರು. ಆದ್ದರಿಂದ ಇವರಿಗೆ 'ಶಠಗೋಪ' ಎಂದು ಹೆಸರಾಯಿತು.

ಕುರುಕೂರು ಎಂಬುದು ಶಠಗೋಪರು ಹುಟ್ಟಿದ ಊರು. ಅದನ್ನು 'ಆಳ್ವಾರ್ ತಿರುನಗರಿ' ಎನ್ನುತ್ತಾರೆ. ದಕ್ಷಿಣ ಭಾರತದ ಪವಿತ್ರ ಕ್ಷೇತ್ರಗಳಲ್ಲಿ ಇದೂ ಒಂದು. ಆದ್ದರಿಂದ ಇದನ್ನು 'ಸೊಬಗಿನ ಕುರುಕೂರು' ಎಂದು ವರ್ಣಿಸಿದ್ದಾರೆ.

ಕಣ್ಣಿನುಣ್ ಶಿಱುತ್ತಾಮ್ಬು - கண்ணிநுண் சிறுத்தாம்பு

(ಮಧುರಕವಿ ಆಳ್ವಾರರ ವಿರಚಿತ)

1 கண்ணிநுண் சிறுத்தாம்பினால் கட்டுண்ணப்
பண்ணிய பெருமாயன், என்னப்பனில்,
நண்ணித் தென்குருகூர் நம்பியென்றக்கால்,
அண்ணிக்கும் அமுதூறும் என்நாவுக்கே.

ಕಣ್ಣಿನುಣ್ ಶಿಱುತ್ತಾಮ್ಬಿನಾಲ್ ಕಟ್ಟುಣ್ಣಪ್
ಪಣ್ಣಿಯ ಪೆರುಮಾಯನ್, ಎನ್ನಪ್ಪನಿಲ್,
ನಣ್ಣಿತ್ತೆನ್ ಕುರುಗೂರ್ ನಮ್ಬಿಯೆನ್ಱಕ್ಕಾಲ್,
ಅಣ್ಣಿಕ್ಕುಮ್ ಅಮುದೂಱುಮ್ ಎನ್ನಾವುಕ್ಕೇ.

ಕಣ್ಣಿ கண்ணி = ಗಂಟುಗಳನ್ನುಳ್ಳ. ನುಣ್ நுண் = ನುಣುಪಾದ, ಶಿಱು சிறு = ಚಿಕ್ಕ, ತಾಮ್ಬಿನಾಲ್ தாம்பினால் = ಹಗ್ಗದಿಂದ, ಕಟ್ಟುಣ್ಣ கட்டுண்ண = ಕಟ್ಟಿಸಿಕೊಳ್ಳುವಂತೆ, ಪಣ್ಣಿಯ பண்ணிய = ಮಾಡಿದ, ಪೆರು ಮಾಯನ್ பெரு மாயன் = ಬಹಳ ಆಶ್ಚರ್ಯಕಾರಕ ಶಕ್ತಿಯುಳ್ಳವನೂ, ಎನ್ ಅಪ್ಪನಿಲ್ என் அப்பனில் = ನನ್ನ ಸ್ವಾಮಿಯಾದ ದೇವೇಶ್ವರನನ್ನು ಬಿಟ್ಟು, ನಣ್ಣಿ நண்ணி = (ಆಳ್ವಾರರನ್ನು) ಸೇರವಾಗಿ (ಚೆನ್ನಾಗಿ) ಆಶ್ರಯಿಸಿ, ತೆನ್ ಕುರುಗೂರ್ தென் குருகூர் = ಸುಂದರವಾದ ಕುರುಗೂರಿನ, ನಮ್ಬಿ ಎನ್ಱಕ್ಕಾಲ್ நம்பி என்றக்கால் = ನಿರ್ವಾಹಕರೆಂಬುದನ್ನು ಹೇಳಿದರೆ, ಅಣ್ಣಿಕ್ಕುಮ್ அண்ணிக்கும் = ತುಂಬ ರುಚಿಕರವಾಗಿರುತ್ತದೆ, ಎನ್ என் = ನನ್ನ, ನಾವುಕ್ಕೇ நாவுக்கே = ನಾಲಗೆಗೇ, ಅಮುದು அமுது = ಅಮೃತವು, ಊಱುಮ್ ஊறும் = ಊರುವುದು. (ಸ್ರವಿಸುವುದು)

ಗಂಟುಗಳುಳ್ಳ ನುಣುಪಾದ ಚಿಕ್ಕ ಹಗ್ಗದಿಂದ ಕಟ್ಟಿಸಿಕೊಳ್ಳುವಂತೆ ಮಾಡಿದ ಬಹಳ ಆಶ್ಚರ್ಯಕಾರಕ ಶಕ್ತಿಯುಳ್ಳವನೂ ನನ್ನ ಸ್ವಾಮಿಯಾದ ಸರ್ವೇಶ್ವರನನ್ನು ಬಿಟ್ಟು, ಆಳ್ವಾರರನ್ನು ಸೇರವಾಗಿ (ಚೆನ್ನಾಗಿ) ಆಶ್ರಯಿಸಿ, ಸುಂದರವಾದ ಕುರುಗೂರಿನ ನಮ್ಬಿ (ನಿರ್ವಾಹಕ) ಎಂದು ಹೇಳಿದರೆ, ಅದು ತುಂಬ ರುಚಿಕರವಾಗಿರುವುದು. ನನ್ನ ನಾಲಗೆಯಲ್ಲಿ ಅಮೃತವು ಊರುವುದು (ಸ್ರವಿಸುವುದು). ①

'ಕಣ್ಣಿನುಣ್ ಶಿಱುತ್ತಾಮ್ಬು' ಎಂಬ ಈ ಸುಂದರವಾದ ಹನ್ನೊಂದು ಪಾಶುರಗಳನ್ನೊಳಗೊಂಡ ದಿವ್ಯಪ್ರಬಂಧವನ್ನು 'ನಾಲಾಯಿರ ದಿವ್ಯಪ್ರಬಂಧದ' ಮೊದಲ ಸಾವಿರದ ಕಡೆಯ ಪ್ರಬಂಧವಾಗಿ ಆರಿಸಿಕೊಳ್ಳಲಾಗಿದೆ. ಇದರ ವೈಶಿಷ್ಟ್ಯದ ಕಡೆಗೆ ಗಮನವಿಟ್ಟು ಹೀಗೆ ಮಾಡಲಾಗಿದೆಯೆನ್ನಬಹುದು. ಭಗವದ್ಗುಣಾನುಭವದಲ್ಲಿ ಆಳವಾಗಿ ಮುಳುಗಿ, ತಲ್ಲೀನರಾಗಿ, ಆನಂದಿಸುತ್ತಿದ್ದವರು ಆಳ್ವಾರರು. ಈ ದಿವ್ಯಪ್ರಬಂಧದ ಕರ್ತೃವಾದ ಆಳ್ವಾರರು ಹಾಗೆ ಮಾಡಲಿಲ್ಲ. ಅದಕ್ಕೆ ಬದಲಾಗಿ ಆಚಾರ್ಯನಿಷ್ಠೆಯಲ್ಲಿ ತಲ್ಲೀನರಾದವರು. ಇದೇ ವೈಶಿಷ್ಟ್ಯ!

ಮಧುರವಾಗಿ ಮಾತನಾಡುವವರೂ, ಮಧುರಕವಿತ್ವವನ್ನು ರಚಿಸುವವರೂ, ಆಳ್ವಾರರ ಮಧುರ ಸೇವಕರೂ ಆದ ಇವರು 'ಮಧುರಕವಿ' ಎಂಬುವರು. ಆಳ್ವಾರ್ ತಿರುನಗರಿ ಎಂದು ಪ್ರಸಿದ್ಧಿ ಹೊಂದಿರುವ ತಿರುಕ್ಕುರುಗೂರಿನ ಸಮೀಪದಲ್ಲಿ, ತಿರುಕ್ಕೋಳೂರು ಎಂಬಲ್ಲಿ, ಆಚಾರ್ಯಸಂಪನ್ನರಾದ ಬ್ರಾಹ್ಮಣಕುಲದಲ್ಲಿ ಹುಟ್ಟಿ ಬೆಳೆದರು. ತಂದೆಯವರಿಂದ ವಿದ್ಯಾಪಾರಂಗತರಾಗಿ, ಪ್ರತ್ಯಕ್ಷಾನುಭವವನ್ನು ಬಯಸಿ, ಸದ್ಗುರುವನ್ನು ಹುಡುಕುತ್ತಾ, ದಿವ್ಯಕ್ಷೇತ್ರಗಳನ್ನು ಸಂದರ್ಶಿಸಲು ಯಾತ್ರೆ ಕೈಗೊಂಡರು. ತಮ್ಮೂರಿಗೆ ಹಿಂತಿರುಗುತ್ತಿರುವಾಗ, ಒಂದು ದಿವ್ಯಜ್ಯೋತಿಯನ್ನು ಕಂಡು, ಅದನ್ನೇ ಅನುಸರಿಸಿ ತಿರುಕ್ಕುರುಗೂರಿನ ದೇವಾಲಯದ ಹುಣಿಸೇಗಿಡದ ಪೊಟರೆಯಲ್ಲಿ ಆಜ್ಯೋತಿ

ಬೆಳಗುತ್ತಿದೆಯೆಂದು ಕಂಡುಕೊಂಡರು. ಹುಟ್ಟಿದ ಕೂಡಲೆಯೇ ದೇಹ ಬಾಧೆಗಳಿಲ್ಲದೆ ಮಹಾ ಯೋಗಯೋಗ್ಯರು ಮೌನಿಗಳಾಗಿ ಇಲ್ಲಿ ನೆಲಸಿದ್ದಾರೆಂದು ತಿಳಿದು ಪರಮಾಶ್ಚರ್ಯಗೊಂಡರು. "ನೀವ್ಯಾರಿಗೆ ಬಾಳುತ್ತಿದ್ದೀರಿ?" ಎಂದು ಪ್ರಶ್ನಿಸಿ, ಅದಕ್ಕೆ ಅನನ್ಯಸ್ಫೂರ್ತಿಯೂ ಆದ ~~ಉತ್ತರವನ್ನು ಪಡೆದು~~ 'ಅದನ್ನೇ ಉಂಡು ಅದರಲ್ಲಿಯೇ ಬಾಳುವೆ' ನೆಂಬ ಉತ್ತರ ಪಡೆದು ಸಂತೋಷಗೊಂಡು, ಅವರನ್ನೇ ತಮ್ಮ ನೆಚ್ಚಿನ ಗುರುವನ್ನಾಗಿ ಆರಿಸಿಕೊಂಡರು. ಅವರನ್ನೇ ಆಶ್ರಯಿಸಿ, ಅವರ ಸೇವೆ ಮಾಡುತ್ತಾ, ಅವರ ದಿವ್ಯಪ್ರಬಂಧಗಳನ್ನು ಅಧ್ಯಯನ ಮಾಡುತ್ತಾ, ಅನನ್ಯಗುರುನಿಷ್ಠೆಯಿಂದ ಇತರ ಆಳ್ವಾರರ ಶ್ರೇಣಿಯಲ್ಲಿ ಗಣ್ಯರೆನಿಸಿದರು.

"ಕಣ್ಣಿನುಣ್ ಶಿರುತ್ತಾಂಬು" ಪ್ರಬಂಧದ ರಚನೆಯಲ್ಲಿ ವೈಶಿಷ್ಟ್ಯವೊಂದಿದೆ. ಇದು ಅಂತಾದಿ. ಎಂದರೆ, ಒಂದು ಪಾಶುರದ ಕಡೆಯ ಪದವನ್ನು ಅದರ ಮುಂದಿನ ಪಾಶುರದ ಮೊದಲ ಪದವನ್ನಾಗಿ ಮಾಡಿಕೊಂಡು ರಚಿಸಿರುವ ಸುಂದರ ಕವಿತೆ. ಅಲ್ಲದೆ, ಇದೊಂದು ಪೂರ್ಣ ಪಾಶುರ ಮಾಲೆಯಾಗಿ ಭಗವಂತನಿಗೂ ಅವನ ಭೂಲೋಕದ ರೂಪವೆನಿಸಿದ ಆಚಾರ್ಯನಿಗೆ ಅರ್ಪಿಸಲು ಯೋಗ್ಯವಾಗಿ, ಬೆಳಗುತ್ತದೆ.

ಇದನ್ನು 'ಕಡೆಯ' ಪ್ರಬಂಧವಾಗಿ ಮಾಡಿದ್ದರೂ ಸಹ, ತಿರುವಾಯ್ಮೊಳಿಯ ಪಾರಾಯಣವನ್ನು ಇದರಿಂದಲೇ ಪ್ರಾರಂಭಿಸುವುದೂ, ಇದರಿಂದಲೇ ಕೊನೆ ಮಾಡುವುದೂ ಸಂಪ್ರದಾಯ.

'ಕಣ್ಣಿನುಣ್ ಶಿರುತ್ತಾಂಬಿನಾಲ್' — ಎಂದು ಮೊದಲಾಗುವ ಪಾಶುರದಲ್ಲಿ, ಕಣ್ಣಿ, ನುಣ್, ಶಿರು, ತಾಂಬು - ಎಂಬ ನಾಲ್ಕು ಪದಗಳಿವೆ. ಕಣ್ಣಿ ಎಂದರೆ ಗಂಟುಗಳು. ನುಣ್ ಎಂದರೆ ಸಣ್ಣ ಪಾದದ್ದು. ಶಿರು ಎಂದರೆ ಚಿಕ್ಕದು. ತಾಂಬು ಎಂದರೆ ಹಗ್ಗ. ಎಲ್ಲವೂ ಸೇರಿ "ಗಂಟುಗಳುಳ್ಳ ಸಣ್ಣಪಾದ ಚಿಕ್ಕ ಹಗ್ಗ" ಎಂದಾಗುತ್ತದೆ. ಹಗ್ಗದಿಂದ ಬಿಗಿಸಿಕೊಂಡವನು ಬಾಲಕೃಷ್ಣ. ಅವನು ನಂದಗೋಕುಲದಲ್ಲಿ ಮನೆಮನೆಯಲ್ಲಿಯೂ ಹಾಲು ಮೊಸರು ಬೆಣ್ಣೆಗಳನ್ನು ಕದ್ದು ತಿಂದು ದೂರು ತಂದಿದ್ದರ ಫಲವಾಗಿ ತಾಯಿ ಯಶೋದೆಗೆ ಕೋಪ ಬಂತು. ಅವನನ್ನು ಕಟ್ಟಿಹಾಕಿಬಿಡುವುದಾಗಿ ಯೋಚಿಸಿದಳು. ಮನೆಯಲ್ಲಿ ಹುಡುಕಿದರೂ ಅದಕ್ಕೆ ತಕ್ಕ ಹಗ್ಗ ಸಿಕ್ಕಲಿಲ್ಲ. ತುಂಡು ತುಂಡಾದ ಹಗ್ಗವೇ! ಒಂದು ಹಗ್ಗದಿಂದ ಅವನನ್ನು ಒರಳಿಗೆ ಕಟ್ಟಿಹಾಕಲು ಯತ್ನಿಸಿದಳು. ಅದು ಸ್ವಲ್ಪ ಚಿಕ್ಕದಾಯಿತು. ಇನ್ನೊಂದು ತುಂಡನ್ನು ಅದಕ್ಕೆ ಗಂಟುಹಾಕಿ, ಮತ್ತೆ ಕಟ್ಟಲು ಯತ್ನಿಸಿದಳು. ಅದೂ ಸ್ವಲ್ಪ ಚಿಕ್ಕದಾಯಿತು. ಇನ್ನೊಂದು ತುಂಡನ್ನು ಅದಕ್ಕೆ ಸೇರಿಸಿದಳು. ಮತ್ತೆ ನೋಡಿದಳು. ಅದೂ ಸ್ವಲ್ಪ ಚಿಕ್ಕದೇ! ಆಶ್ಚರ್ಯ! ಹೇಗಾದರೂ ಮಾಡಿ ಕೃಷ್ಣನನ್ನು ಕಟ್ಟಿಹಾಕಲೇ ಬೇಕು! ಹೀಗೆ ಗಂಟುಗಳುಳ್ಳ ಹಗ್ಗ ಸಿದ್ಧವಾದದ್ದು! ಆದರೆ, ಭಗವಂತನನ್ನು ಕಟ್ಟಿಹಾಕುವುದಕ್ಕೆ ಯಾರಿಂದ ಸಾಧ್ಯ? ಆದರೂ ತಾಯಿ ತನ್ನ ಯತ್ನವನ್ನು ಬಿಡಲಿಲ್ಲ. ಕಡೆಗೆ, ತಾಯಿ ಯಶೋದೆಯನ್ನು ತೃಪ್ತಿಸುವುದಕ್ಕಾಗಿ, ಕೃಷ್ಣನು ಆ ಗಂಟುಗಳ ಹಗ್ಗದಿಂದಲೇ ಕಟ್ಟಿಸಿಕೊಳ್ಳುವುದಕ್ಕೆ ಸಿದ್ಧನಾದನಲ್ಲ! ಮೊದಲು ಒಂದು ಸುತ್ತಿಗೂ ಸಾಲದ ಹಗ್ಗ ಈಗ ಮೂರು ಸುತ್ತು ಹಾಕಿ ಕಟ್ಟಲು ಸಾಕಷ್ಟು ದೊಡ್ಡದಾಗಿದೆ! "ಪೆರುಮಾಯನ್" ಅಲ್ಲವೇ ಅವನು! ~~ಆತ~~ ಆಶ್ಚರ್ಯಕಾರಕ ಶಕ್ತಿಯುಳ್ಳವನಲ್ಲವೇ! ಭಗವಂತನಾಗಿ ತನ್ನ ಸೌಶೀಲ್ಯ, ಸೌಲಭ್ಯ, ವಾತ್ಸಲ್ಯ ಮತ್ತು ಆಶ್ರಿತಪಾರತಂತ್ರ್ಯವನ್ನು ತನ್ನ [illegible] ತೋರಿಸನೇ?

ಆಳ್ವಾರರು ಹೇಳುತ್ತಾರೆ: ಪೆರುಮಾಯನ್ ಆದ ಶ್ರೀಕೃಷ್ಣನ ಆಶ್ಚರ್ಯದ ಗುಣಗಳನ್ನು ಅನುಭವಿಸುತ್ತಾ ಆನಂದಿಸುತ್ತಾ ಕಾಲಕಳೆಯುವುದು ಆಳ್ವಾರರು, ಭಾಗವತರು, ಭಗವದ್ಭಕ್ತರು ಎಲ್ಲರೂ ನಡೆದ ದಾರಿ, ನಿಜ. ಆದರೆ, ಗುರುಧ್ಯಾನದ ಪವಿತ್ರಾತ್ಮನ ದೇಹವನ್ನು ಒಂದು ದಿನ ಬಿಟ್ಟು ಇರಿಸಿದರೂ ಸಾಧು. ನನಗೆ ಅದು ಬಲು ರುಚಿ. ನನ್ನ ನಾಲಗೆಯಲ್ಲಿ ಅಮೃತವನ್ನೇ ಉಣಿಸುವುದು! ಆಳ್ವಾರರನ್ನು ನನ್ನ ನೆಚ್ಚಿನ

గురుం ప్రకాశయేత్ ధీమాన్-
మంత్రం యత్నేన గోపయేత్-
(సత్పురుష లక్షణ)

ಗುರುವನ್ನಾಗಿ ಆಶ್ರಯಿಸಿ, ಸೇವೆ ನಡೆಸುವುದರಿಂದ, ನನಗೆ ಇಷ್ಟೊಂದು ತೃಪ್ತಿ ಯುಂಟಾಗುವುದೋ!

ಭಗವಂತನನ್ನೇ ನೇರವಾಗಿ ಆಶ್ರಯಿಸುವುದಕ್ಕಿಂತಲೂ, ಭಗವಂತನ ಭಕ್ತರನ್ನು, ಪಾದ ಸೇವಕರನ್ನು ಆಶ್ರಯಿಸಿ, ಅವರ ಸೇವೆ ಮಾಡಿ, ಅವರ ಮಾರ್ಗವನ್ನು ಹಿಡಿಯುವುದೇ ಲೇಸು ಎಂದು ಹೇಳುವಂತಿದೆಯೇ!

2. நாவினால் நவிற்று இன்பமெய்தினேன்,
மேவினேன் அவன் பொன்னடி மெய்ம்மையே,
தேவு மற்றறியேன் குருகூர் நம்பி,
பாவினின்னிசை பாடித்திரிவனே.

ನಾವಿನಾಲ್ ನವಿಟ್ರು ಇನ್ಬಮೆಯ್ದಿನೇನ್
ಮೇವಿನೇನ್ ಅವನ್ ಪೊನ್ನಡಿ ಮೆಯ್ಮ್ಮೈಯೇ,
ಶೇವುಮಟ್ರರಿಯೇನ್ ಕುರುಕೂರ್ ನಂಬಿ,
ಪಾವಿನಿನ್ನಿಶೈ ಪಾಡಿತ್ತಿರಿವನೇ.

ನಾವಿನಾಲ್ நாவினால் = ನಾಲಗೆಯಿಂದ, ನವಿಟ್ರು நவிற்று = ಸ್ತೋತ್ರ ಮಾಡಿ, ಇನ್ಬಮ್ இன்பம் = ಆನಂದವನ್ನು, ಎಯ್ದಿನೇನ್ எய்தினேன் = ಪಡೆದಿದ್ದೇನೆ, ಅವನ್ அவன் = ಆ ಆಳ್ವಾರರ, ಪೊನ್ ಅಡಿ பொன் அடி = ಚಿನ್ನದಂಥ ಪಾದಗಳನ್ನು, ಮೇವಿನೇನ್ மேவினேன் = ಆಶ್ರಯಿಸಿದ್ದೇನೆ, ಮೆಯ್ ಮೆಯ್ಯೇ மெய்ம்மையே = ಇದು ಸತ್ಯವೇ, ಮಟ್ರು மற்று = ಇತರ, ಶೇವು தேவு = ದೇವರನ್ನು, ಅರಿಯೇನ್ அறியேன் = ಅರಿಯೆನು, ಕುರುಕೂರ್ ನಂಬಿ குருகூர் நம்பி = ಕುರುಕೂರಿನ ಪ್ರಸಿದ್ಧ ಪುರುಷನ, ಪಾವಿನ್ பாவின் = ಹಾಡುಗಳನ್ನು (ಪಾಶುರಗಳನ್ನು), ಇನ್ ಇಶೈ இன் இசை = ಇನಿದಾದ (ಮಧುರವಾದ) ರಾಗದಲ್ಲಿ, ಪಾಡಿ பாடி = ಹಾಡಿಕೊಂಡು, ತಿರಿವನೇ திரிவனே = ಅಲೆದಾಡುವೆನು.

ನಾಲಗೆಯಿಂದ ಆಳ್ವಾರರನ್ನು ಸ್ತುತಿಸಿ ಆನಂದವನ್ನು ಪಡೆದಿದ್ದೇನೆ. ಆಳ್ವಾರರ ಚಿನ್ನದಂಥ ಅಡಿಗಳನ್ನು ಆಶ್ರಯಿಸಿದ್ದೇನೆ. ಇದು ಸತ್ಯವೇ. ಬೇರಾವ ದೇವರನ್ನೂ ನಾನು ಅರಿಯೆನು. ಕುರುಕೂರಿನ ಪ್ರಸಿದ್ಧ ಪುರುಷನ ಹಾಡು (ಪಾಶುರ)ಗಳನ್ನು ಮಧುರವಾದ ರಾಗಗಳಲ್ಲಿ ಹಾಡಿಕೊಂಡು ಅಲೆದಾಡುವೆನು. ②

ಹಿಂದಿನ ಪಾಶುರದಲ್ಲಿ, 'ಶಿರುತ್ತಾಂಬಿನಾಲ್' ಎಂದರೆ ಚಿಕ್ಕ ಹಗ್ಗದಿಂದ ಬಾಲಕೃಷ್ಣನು ಅವನ ತಾಯಿ ಯಶೋದೆಯಿಂದ ಕಟ್ಟಿಸಿಕೊಂಡನು, ಎಂದು ಹೇಳಲಾಯಿತು. ತುಂಟಾಟ ಮಾಡಿದ ಮಗುವನ್ನು ತಾಯಿ ಕಟ್ಟಿಹಾಕಿದ ವಿಷಯ ಹಾಗಿರಲಿ. ವಾಸ್ತವವಾಗಿ ನಡೆದದ್ದು ಗಾಢವಾದ ಪ್ರೇಮದಿಂದ ಭಗವಂತನನ್ನು ಯಶೋದೆ ಕಟ್ಟಿಹಾಕಿದಳು. ನಿಶ್ಚಲವಾದ ಭಕ್ತಿಯೆಂಬ ~~[illegible]~~ ಶಿರುತ್ತಾಂಬು. ಅದರಿಂದ ಭಗವಂತನನ್ನು ಕಟ್ಟಿಹಾಕುವುದು ಸಾಧ್ಯ.

~~[illegible]~~ ಆಳ್ವಾರರು ಹೇಳುತ್ತಾರೆ: ನಾನು ನನ್ನ ಗುರುವನ್ನು ಮನಸಾರ, ಬಾಯಿ ತುಂಬ ಸ್ತುತಿಸುತ್ತೇನೆ. ಅವರ ಶ್ರೇಷ್ಠವಾದ ಅಡಿಗಳನ್ನೇ ಆಶ್ರಯಿಸಿದ್ದೇನೆ. ಅವರು ರಚಿಸಿರುವ ಹಾಡುಗಳನ್ನೇ ಇಂಪಾದ ರಾಗಗಳಲ್ಲಿ ಹಾಡಿಕೊಂಡು ಅಲೆದಾಡುತ್ತೇನೆ. ಗುರುವಿನ ಹಿರಿಮೆಯನ್ನು ಎಲ್ಲೆಲ್ಲೂ ಪ್ರಕಟಮಾಡುತ್ತೇನೆ. ಗುರುವೇ ನನಗೆ ದೇವರು. ಅವರನ್ನು ಬಿಟ್ಟು ಬೇರೆ ದೈವವನ್ನು ನಾನರಿಯೆ. ಹೀಗೆ ಮಾಡುವುದರಿಂದ ನನಗೆ ಬಹಳ ಆನಂದವಾಗುತ್ತದೆ. ಕಾಯ, ಮನಸ್ಸು, ವಾಕ್ಕುಗಳಿಂದ ನಾನು ಸತ್ಯವಾಗಿ ಗುರುಸೇವೆ ಮಾಡುತ್ತೇನೆ.

ಈ ಪಾಶುರದಲ್ಲಿ ಆ ಶಿರುತ್ತಾಂಬು ಯಾವುದು ಎಂಬುದನ್ನು ಇನ್ನೊಂದು ರೀತಿಯಲ್ಲಿ ಆಳ್ವಾರರು ವಿವರಿಸುತ್ತಿದ್ದಾರೆ. ಗುರುನಿಷ್ಠೆಯಿಂದ, ಗುರುಶುಶ್ರೂಷೆಯಿಂದ ಗುರುವು ಸುಪ್ರೀತನಾಗುವನು. ಗುರುವು ಶಿಷ್ಯನನ್ನು ಭಗವಂತನ ಕೃಪೆಗೆ ಒಪ್ಪಿಸುವನು. ಭಗವಂತನೂ ಶಿಷ್ಯನಿಗೆ ಒಲಿಯುವಂತೆ ಅವರಿಬ್ಬರ ನಡುವೆ ಮೈತ್ರಿಯನ್ನುಂಟುಮಾಡುವನು. ಆದ್ದರಿಂದ

ಗುರುಸ್ಥಾನದ ನಮಗೆ ಲಭ್ಯವಿರುವಾಗ
ಭಗವಂತನ ದರ್ಶನ ನಮಗಿಲ್ಲದವನಾ
ದರೂ ಪೂಜಾರಿ, ವಿದ್ಯಾವಂತ, ಗಾಯತ್ರಿ
ಉಪದೇಶಕ ಇವರಿಗಿಂತ ಹಿರಿಯ
ಗುರು ಅವನನ್ನು ರಕ್ಷಕನೆಂದೇ ಬಗೆವಾಗ
ಅವನ ನಿರ್ದಿಷ್ಟ ತ್ರಿಕಾಲ ಸಂದರ್ಶನವು
ಭಕ್ತಿ ಗೌರವ ಸ್ಮರಣೆ, ಬ್ರಹ್ಮಚರ್ಯ - ಶರಣಾ
ಗತಿ ಮಾಡುವಾಗ ಅವನನ್ನು ಆಚಾರ್ಯ
ಮಾತ್ರವಲ್ಲದೆ ಪರಮಾತ್ಮನ ಸಮಕ್ಷ
ದಲ್ಲಿ ನಿವೇದಿಸುವ ಅಧಿಕಾರಿ ರೂಪ
ನಾಗಿರುತ್ತಾನೆ. ಅದರಿಂದಲೇ -
ಗುರು ಬ್ರಹ್ಮ - ಗುರು ವಿಷ್ಣು - ಗುರುದೇ
ವೋ ಮಹೇಶ್ವರಃ - ಗುರು ಸಾಕ್ಷಾತ್
ಪರಬ್ರಹ್ಮ ಎನ್ನುವುದು - ಇದೇ ಸಮಾನ
ನ್ಯಾಯದ ಗರ್ಭ ಸಂಸ್ಕೃ - ಶ್ರೀವೈಷ್ಣವರಿ
ಗೆ ಬಹಳ ಮುಖ್ಯವಾದುದು - ಆಚಾರ್ಯ
ಅಭಿಮಾನ - ಮೋಕ್ಷ .

ಗುರುವೇ ಜೀವಾತ್ಮವನ್ನು ಆಳುವವನು. ಭಗವಂತನಿಗೂ ಶಿಷ್ಯನಿಗೂ ಅಗಲದಿರುವ ಸಂಬಂಧ
ವನ್ನು ಒದಗಿಸುವವನು ಗುರುವೇ.

3. திரிதந்தாகிலும் தேவபிரானுடை,
கரிய கோலத் திருவுருக்காண்பன் நான்,
பெரியவண் குருகூர் நகர் நம்பிக்காள்.
உரியனாய், அடியேன் பெற்றநன்மையே.

ತಿರಿದನ್ದಾಂಗಿಲುಮ ದೇವ ಪಿರಾನುಡೈ,
ಕರಿಯಕೋಲತ್ತಿರುವುರುಕ್ಕಾಣ್ಬನ್ನಾನ್,
ಪೆರಿಯವಣ್ ಕುರುಗೂರ್ ನಗರ್ ನಮ್ಬಿಕ್ಕಾಳ್
ಉರಿಯನಾಯ್, ಅಡಿಯೇನ್ ಪೆಟ್ರನನ್ಮೈಯೇ.

ತಿರಿತನ್ದಾಂಗಿಲುಮ திரிதந்தாகிலும் = (ಭಗವಂತನನ್ನು ಉಪೇಕ್ಷಿಸಿ) ಅಲೆದಾ
ಡಿದನಾದರೂ, ದೇವ ಪಿರಾನುಡೈ தேவபிரானுடை = ದೇವಾಧಿದೇವನೊಡನೆ,
ಕರಿಯ கரிய = ಕರಿಯಬಣ್ಣದ, ಕೋಲಮ கோலம் = ಸುಂದರವಾದ, ತಿರು திரு
= ಶ್ರೀದೇವಿಯ, ಉರು உரு = ಸ್ವರೂಪವನ್ನು, ಕಾಣ್ಬನ್ ನಾನ್ காண்பன் நான் =
ನಾನು ನೋಡುವವನಾಗುತ್ತೇನೆ, ಪೆರಿಯ பெரிய = ಹಿರಿಮೆಯ, ವಣ್ வண் = ಉದಾ
ರಿಯಾದ, ಕುರುಗೂರ್ ನಗರ್ ನಮ್ಬಿಕ್ಕು குருகூர் நகர் நம்பிக்கு = ತಿರುಕ್ಕುರು
ಗೂರಿನ ಶ್ರೇಷ್ಠ ಪುರುಷನ, ಉರಿಯ உரிய = ದೃಢವಾದ, ಆಳ್ ಆಂ ஆள் ஆகி =
ಸೇವಕನಾಗಿ, ಅಡಿಯೇನ್ அடியேன் = ದಾಸನಾದ ನಾನು, ಪೆಟ್ರ பெற்ற = ಪಡೆದ,
ನನ್ಮೈಯೇ நன்மையே = ಒಳ್ಳೆಯದೇ ಇದು.

(ಭಗವಂತನನ್ನು ಉಪೇಕ್ಷಿಸಿ) ಅಲೆದಾಡಿದನಾದರೂ ಕರಿಯಬಣ್ಣದ ದೇವಾಧಿದೇವನೊಡನೆ ಸುಂ
ದರವಾದ ಶ್ರೀದೇವಿಯ ಸ್ವರೂಪವನ್ನು ನಾನು ನೋಡುವವನಾಗುತ್ತೇನೆ. ಇದೇ ಹಿರಿಮೆಯ
ಉದಾರಿಯಾದ ತಿರುಕುರುಗೂರಿನ ಶ್ರೇಷ್ಠ ಪುರುಷನ ದೃಢವಾದ ಸೇವಕನಾಗಿ ದಾಸನಾದ ③
ನಾನು ಪಡೆದ ಒಳ್ಳೆಯದು.

ಆಳ್ವಾರರು ಹೇಳುತ್ತಾರೆ: ನನಗೆ ಗುರುವೇ ಮುಖ್ಯ. ಗುರುವೇ ಸರ್ವಸ್ವ. ಇದನ್ನು
ನಾನು ದೃಢವಾಗಿ ನಂಬಿದೆ. ದೇವಾಧಿದೇವನ ಸೇವೆಗೆ ಕಾತರಪಡಲಿಲ್ಲ. ಭಗವಂತನನ್ನು
ಉಪೇಕ್ಷಿಸಿದೆ. ಭಗವಂತನ ಅಡಿಗಳನ್ನು ಹಿಡಿಯುವುದರ ಬದಲಾಗಿ ನನ್ನ ಗುರುವಿನ ಪ್ರಾಜ್ಞ
ಪಾದಗಳನ್ನು ಆಶ್ರಯಿಸಿದೆ. ಅನನ್ಯ ಭಕ್ತಿಯಿಂದ ಗುರು ಸೇವೆ ಮಾಡಿದೆ. ಗುರುವಿನ ಕೀರ್ತಿ
ವೈಭವಗಳನ್ನು ಕೊಂಡಾಡುತ್ತಾ ಅಲೆದಾಡಿದೆ. ಈ ಗುರು ಸೇವೆಯಿಂದ ನಾನು ಪಡೆದದ್ದೇನು?
ಲಕ್ಷ್ಮೀ ಸಮೇತನಾದ ನೀಲಮೇಘಶ್ಯಾಮನನ್ನು ನಾನು ಪ್ರತ್ಯಕ್ಷವಾಗಿ ನೋಡುವಂತಾಯಿತಲ್ಲ!
ಇದೇ ನನ್ನ ಹಿರಿಯ ಭಾಗ್ಯ!

ಗುರು ಸೇವೆಯಿಂದ, ಗುರುನಿಷ್ಠೆಯಿಂದ ಸಾಧ್ಯವಾಗದ್ದು ಉಂಟೇ? ದುರ್ಲಭವಾದ
ಭಗವಂತನ ದರ್ಶನವೇ ಲಭ್ಯವಾಗುವುದು!

4. நன்மையால் மிக்க நான்மறையாளர்கள்,
புன்மையாகக் கருதுவராதலில்,
அன்னையாயத்தனாய் என்னையாண்டிடும்
தன்மையான், சடகோபனென் நம்பியே.

ನನ್ಮೈಯಾಲ್ ಮಿಕ್ಕ ನಾನ್ಮರೈಯಾಳರ್ಗಳ್,
ಪುನ್ಮೈಯಾಕ್ಕರುದುವರಾದಲಿಲ್,
ಅನ್ನೈಯಾಯತ್ತನಾಯ್ ಎನ್ನೈಯಾಣ್ಡಿಡುಮ
ತನ್ಮೈಯಾನ್, ಶಠಕೋಪನೆನ್ ನಮ್ಬಿಯೇ.

ನನ್ಮೈಯಾಲ್ நன்மையால் = ಸದ್ಗುಣಗಳಿಂದ (ಒಳ್ಳೆಯತನದಿಂದ), ಮಿಕ್ಕ
மிக்க = ಶ್ರೇಷ್ಠರಾದ, ನಾಲ್ ಮರೈ ಆಳರ್ಗಳ್ நால் மறை ஆளர்கள் =

ಗುರುವನ್ನೇ ನಂಬಿ, ದೇವರನ್ನೂ ಸಹ
ಅಪಾಯದಲ್ಲೂ ನಂಬದೆ ಇದ್ದುದರಿಂದ
ಅವರ ಆಚಾರ್ಯ ಭಕ್ತಿ ಬಹಳ ದೊಡ್ಡದು
ಮಾತ್ರ ಗುರುಗಳ ಪ್ರಾರ್ಥನೆಯಿಂದ [illegible]
ಅದರಿಂದ ಇವರ ಪಾಶುರಗಳನ್ನು
ಪ್ರಬಂಧ ಪಾರಾಯಣ ಮುಂತಾದವರಿಗೆ
ಬಹಳ ಅಪೇಕ್ಷಿಸಿದರು.

ನಾಲ್ಕು ವೇದಗಳ ಸಂಪನ್ನರು, ಪುನ್ಮೈ புன்மை = (ನನ್ನನ್ನು) ದುರ್ಗುಣಗಳ. ಆಗ ஆக = ರೂಪವೆತ್ತವನಂತೆ, ಕರುದುವರ್ கருதுவர் = ಉದ್ದೇಶಿಸಿ ಉಪೇಕ್ಷಿಸುವರು, ಆದಲಿಲ್ ஆதலில் = ಆ ಕಾರಣದಿಂದ, ಅನ್ನೈ ಆಯ್ அன்னை ஆய் = ತಾಯಿಯಾಗಿ, ಅತ್ತನ್ ಆಯ್ அத்தன் ஆய் = ತಂದೆಯಾಗಿ, ಎನ್ನೈ என்னை = ನನ್ನನ್ನು, ಆಣ್ಡಿಡುಮ್ ஆண்டிடும் = ರಕ್ಷಿಸುವ, ತನ್ಮೈಯಾನ್ தன்மையான் = ಸ್ವಭಾವದವನಾದ, ಶಠಕೋಪನ್ சடகோபன் = ಶಠಗೋಪನೇ, ಎನ್ என் = ನನ್ನ, ನಮ್ಬಿಯೇ நம்பியே = ಪವಿತ್ರಾತ್ಮನು.

ಸದ್ಗುಣಗಳಿಂದ (ಒಳ್ಳೆಯ ಗುಣದಿಂದ) ಸುಪ್ರಸಿದ್ಧರಾದ ನಾಲ್ಕು ವೇದಗಳ ಸಂಪನ್ನರು ದುರ್ಗುಣಗಳೇ ರೂಪವೆತ್ತವನಂತೆ ನನ್ನನ್ನು ದ್ವೇಷಿಸಿ ಉಪೇಕ್ಷಿಸುವರು. ಆದ್ದರಿಂದ, ~~[illegible]~~ ತಾಯಿಯಾಗಿ, ತಂದೆಯಾಗಿ ನನ್ನನ್ನು ರಕ್ಷಿಸುವ ಸ್ವಭಾವದವನಾದ ಶಠಗೋಪನೇ ನನ್ನ ಶ್ರೇಷ್ಠ ಪುರುಷನು. ④

ಈ ಪಾಶುರದಲ್ಲಿ ಮಧುರಕವಿಗಳು ಶಠಗೋಪರನ್ನು ಏತಕ್ಕಾಗಿ ತಮ್ಮ ಗುರುವನ್ನಾಗಿ ಆರಿಸಿಕೊಂಡರೆಂಬುದನ್ನು ಹೇಳುತ್ತಾರೆ:

ನಾಲ್ಕು ವೇದಗಳನ್ನು ಕೂಲಂಕಷವಾಗಿ ಅಭ್ಯಾಸ ಮಾಡಿ, ತಮ್ಮ ನಡತೆಯಲ್ಲಿ ಸದ್ಗುಣಗಳನ್ನು ಪರಿಪಾಲಿಸುತ್ತಾ ಆಚಾರವಂತರಾಗಿ ಬಾಳುತ್ತಿದ್ದವರು ವೈದಿಕರು. ಅವರ ವಿದ್ಯೆಗೆ ತಕ್ಕಂತೆ ಒಳ್ಳೆಯತನವೂ ಅವರಲ್ಲಿ ತೋರಿಬರುತ್ತಿತ್ತು. ಮಧುರಕವಿಗಳೂ ಅವರಂತೆಯೇ ಸತ್ಕುಲದಲ್ಲಿ ಹುಟ್ಟಿದವರು. ಸದ್ವಿದ್ಯಾಪಾರಂಗತರು. ದಿವ್ಯದೇಶಗಳನ್ನು ಸಂಚರಿಸಿದವರು. ಆದರೂ ಅವರಿಗೆ, ಅವರ ಮನೋಗತಕ್ಕೆ ತಕ್ಕಂತೆ, ~~ಅವರ~~ ಸಂಶಯ ಅನುಮಾನಗಳಿಗೆ ಸಮಂಜಸವಾಗಿ ಉತ್ತರ ಕೊಡುವ ವಿಶ್ವಾಸಯೋಗ್ಯರಾದ ಗುರು ಒಬ್ಬರು ಬೇಕಿತ್ತು. ವೈದಿಕರಲ್ಲಿ ಅಂಥವರನ್ನು ಅವರು ಕಂಡುಕೊಳ್ಳಲಾಗಲಿಲ್ಲ. ವೈದಿಕರಾದರೋ ಅವರ ಪ್ರಶ್ನೆಗಳಿಗೆ ಶಂಕೆಗಳಿಗೆ ಸಮಾಧಾನ ಕೊಡದೆ, ಅವರನ್ನು ದುರ್ಗುಣಗಳ ಗಣಿಯೆಂದು ದೂರ ತಳ್ಳಿದರು. ಶಠಗೋಪರಾದರೋ ~~ಅ~~ ಅವರು ಕೇಳಿದ ಪ್ರಶ್ನೆಗೆ ಸಮಂಜಸವಾದ ಸತ್ಯವಾದ ಉತ್ತರವನ್ನು ಕೊಟ್ಟು ಅವರನ್ನು ತೃಪ್ತಿಪಡಿಸಿದ್ದರಿಂದಲೂ, ತಾಯಿಯಂತೆಯೂ ತಂದೆಯಂತೆಯೂ ವಾತ್ಸಲ್ಯಪರರಾಗಿ ಅವರನ್ನು ಬರಮಾಡಿಕೊಂಡದ್ದರಿಂದಲೂ, 'ಗುರುವೇ ಶರಣು' ಎಂದು ಅನನ್ಯವಾಗಿ ಶರಣಾಗತ ಅವರನ್ನು ಸರ್ವವಿಧದಲ್ಲೂ ರಕ್ಷಿಸುವೆನೆಂದು ಭರವಸೆ ಕೊಟ್ಟದ್ದು ಮಾತ್ರವಲ್ಲದೆ ಹಾಗೆಯೇ ನಡೆದುಕೊಂಡದ್ದರಿಂದಲೂ ಅವರು ಶಠಗೋಪರನ್ನೇ ತಮ್ಮ ಗುರುವನ್ನಾಗಿ ವರಿಸಿದ್ದು!

5. நம்பினேன் பிறர்நன் பொருள் தன்னையும்,
நம்பினேன் மடவாரையும் முன்னெலாம்,
செம்பொன் மாடத் திருக்குருகூர் நம்பிக்கு
அன்பனாய், அடியேன் சதிர்த்தேனின்றே.

ನಮ್ಬಿನೇನ್ ಪಿಱರ್ ನನ್ ಪೊರುಳ್ ತನ್ನೈಯುಮ್,
ನಮ್ಬಿನೇನ್ ಮಡವಾರೈಯುಮ್ ಮುನ್ನೆಲಾಮ್,
ಶೆಮ್ಬೊನ್ ಮಾಡತ್ತಿರುಕ್ಕುರುಹೂರ್ ನಮ್ಬಿಕ್ಕು
ಅನ್ಬನಾಯ್, ಅಡಿಯೇನ್ ಶದಿರ್ತ್ತೇನಿನ್ಱೇ.

ಮುನ್ முன் = ಇದುವರೆಗೆ, ~~ಎಲಾಮ್ எலாம் = ಎಲ್ಲಾ~~, ಪಿಱರ್ பிறர் = ಇತರರ, ನಲ್ ಪೊರುಳ್ ತನ್ನೈಯುಮ್ நல் பொருள் தன்னையும் = ಒಳ್ಳೆಯ ವಸ್ತು ವಿಷಯಗಳನ್ನು, ಎಲಾಮ್ எலாம் = ಎಲ್ಲವನ್ನು, ನಮ್ಬಿನೇನ್ நம்பினேன் = ನಂಬಿದೆನು, ಮಡವಾರೈಯುಮ್ மடவாரையும் = (ಇತರರ) ಸ್ತ್ರೀಯರನ್ನು, ನಮ್ಬಿನೇನ್ நம்பினேன் = ನಂಬಿದೆನು, ಇನ್ಱು இன்று = ಇಂದು, ಶೆಮ್ ಪೊನ್ ಮಾಡಮ್ செம் பொன் மாடம் = ಕೆಂಪುಚಿನ್ನದಂತೆ ಪ್ರಕಾಶಿಸುವ ಮಹಡಿ ಮನೆಗಳ, ತಿರುಕ್ಕುರುಹೂರ್ ನಮ್ಬಿಕ್ಕು திருக்குருகூர் நம்பிக்கு = ಪವಿತ್ರವಾದ

ಕುರುಕೂರಿನ ಶ್ರೇಷ್ಠಪುರುಷನಿಗೆ, ಅನ್ಬನ್ ಆಯ್ அன்பன் ஆய் = ವಿಶ್ವಾಸ ಪಾತ್ರನಾಗಿ, ಅಡಿಯೇನ್ அடியேன் = ಪಾದಸೇವಕನೆನಿಸಿಕೊಳ್ಳುವ ನಾನು, ಶದಿರ್ತ್ತೇನ್ சதிர்த்தேன் = ಅದ್ಭುತವಾದ ಭಾಗ್ಯವಂತನಾದೆ (ಆನಂದದಿಂದ ಕುಣಿದಾಡುತ್ತೇನೆ).

ಇಲ್ಲಿಯ ವರೆಗೆ ಇತರರ ಬಳಿಯ ವಸ್ತು ವಿಷಯಗಳನ್ನೆಲ್ಲಾ ನಂಬಿದ್ದೆ. ಇತರರ ಸ್ತ್ರೀಯರನ್ನು ನಂಬಿದ್ದೆ. ಇಂದು, ಕೆಂಪು ಚಿನ್ನದಂತೆ ಹೊಳೆಯುವ ತಿರುಕ್ಕುರುಕೂರಿನ ಪವಿತ್ರಾತ್ಮನಿಗೆ ವಿಶ್ವಾಸ ಪಾತ್ರನಾಗಿ, ಆತನ ಪಾದಸೇವಕನೆನಿಸಿಕೊಳ್ಳುವ ನಾನು ಅಪೂರ್ವವಾದ ಭಾಗ್ಯವಂತನಾದೆ.(ಕುಣಿದಾಡುವಂತಾದೆ). (5)

ಗುರುವನ್ನು ವರಿಸಿದ ಬಳಿಕ, ಆ ಗುರುವಿನಲ್ಲಿ ಶಿಷ್ಯನಿಗೆ ಇರಬೇಕಾದ ದೃಢನಂಬಿಕೆಯನ್ನೂ ಪೂರ್ಣವಿಶ್ವಾಸವನ್ನೂ ಈ ಪಾಶುರ ಕಲಿಸುತ್ತದೆ. ಗುರುವು ತನಗೆ ಸನ್ಮಾರ್ಗವನ್ನು ತೋರಿಸಿ ಅದನ್ನು ಅನುಸರಿಸುವಂತೆ ನೋಡಿಕೊಳ್ಳುವನೆಂಬ ಗಾಢವಾದ ನಂಬಿಕೆಯೂ, ತನ್ನ ಜೀವನವನ್ನು ಅಭ್ಯುದಯಗೊಳಿಸಿ, ಗುರಿಯನ್ನು ಮುಟ್ಟಿಸುವನೆಂಬ ವಿಶ್ವಾಸವನ್ನೂ ಕಲಿಸುತ್ತದೆ.

ಮಧುರಕವಿ ಆಳ್ವಾರರು ಹೇಳುತ್ತಾರೆ: ಶಠಗೋಪನು ನನಗೆ ಗುರುವಾಗಿ ಲಭಿಸುವ ವರೆಗೆ, ನಾನು ಹಲವಾರು ಸಜ್ಜನರ ಶುಶ್ರೂಷೆ ಮಾಡಿದೆ. ಅವರ ದಿವ್ಯಜ್ಞಾನಗಳನ್ನು ಸುಜ್ಞಾನವನ್ನು ಅನುಕರಣೆ ಮಾಡಿ ಉಜ್ಜೀವನಗೊಳ್ಳಲು ಯತ್ನಿಸಿದೆ. ಅವರ ಸ್ತ್ರೀಯರನ್ನು ಆಶ್ರಯಿಸಿದೆ. ಆದರೆ, ಅವುಗಳಿಂದ ನನಗೆ ದೊಡ್ಡ ಪ್ರಯೋಜನ ಲಭಿಸಲಿಲ್ಲ. ತಿರುಕುರುಕೂರಿನ ಪವಿತ್ರಾತ್ಮನಾದ ಶಠಗೋಪನ ದರ್ಶನವಾದ ಬಳಿಕ, ಆತನ ವಿಶ್ವಾಸಕ್ಕೆ ನಾನು ಪಾತ್ರನೆನಿಸಿಕೊಂಡ ಬಳಿಕ, ನಾನು ಆ ಮಹಾಮಹಿಮನ ಪಾದಸೇವಕನೆನಿಸಿಕೊಳ್ಳುವ ಅಪೂರ್ವವಾದ ಭಾಗ್ಯ ದೊರೆಯಿತು. ಅದೊಂದು ಅಲಭ್ಯಲಾಭವೇ! ಅದರಿಂದ, ನನಗೆ ಹಿಡಿದಿಡಲಾರದಷ್ಟು ಆನಂದವಾಗಿದೆ. ನಾನು ಕುಣಿದಾಡುವಂತಾಗಿದೆ.

6. இன்று தொட்டு மெழுமையுமெம்பிரான்,
நின்றுதன் புகழேத்தவருளினான்,
குன்றமாடத்திருக்குருகூர்நம்பி,
என்றுமென்னை யிகழ்விலன் காண்மினே.

ಇನ್ಱು ತೊಟ್ಟು ಮೆೞುಮೈಯುಮೆಮ್ ಪಿರಾನ್,
ನಿನ್ಱು ತನ್ ಪುಗೞೇತ್ತವರುಳಿನಾನ್,
ಕುನ್ಱ ಮಾಡತ್ತಿರುಕ್ಕುರುಕೂರ್ ನಮ್ಬಿ),
ಎನ್ಱುಮೆನ್ನೈ ಯಿಗೞ್ವಿಲನ್ ಕಾಣ್ಮಿನೇ.

ಇನ್ಱು ತೊಟ್ಟುಮ್ இன்று தொட்டும் = ಇಂದಿನಿಂದಲೂ, ಎೞುಮ್ಮೈಯುಮ್ எழுமையும் = (ನನ್ನ) ಅಭ್ಯುದಯವನ್ನೂ, ಎಮ್ ಪಿರಾನ್ எம் பிரான் = ನನ್ನ ಸ್ವಾಮಿಯು, ನಿನ್ಱು நின்று = ನಿಂತು, ತನ್ ಪುಗೞ್ தன்புகழ் = ತನ್ನ ಕೀರ್ತಿಯನ್ನು, ಏತ್ತ ஏத்த = ಸ್ತುತಿಸುವುದನ್ನು, ಅರುಳಿನಾನ್ அருளினான் = ಕೃಪೆಮಾಡಿದ್ದಾನೆ, ಕುನ್ಱಮ್ ಮಾಡಮ್ குன்றம் மாடம் = ಬೆಟ್ಟದಂಥ ಮನೆಗಳುಳ್ಳ, ತಿರುಕ್ಕುರುಗೂರ್ ನಮ್ಬಿ திருக்குருகூர்நம்பி = ತಿರುಕುರುಕೂರಿನ ಪವಿತ್ರಾತ್ಮನು, ಎನ್ಱುಮ್ என்றும் = ಎಂದೆಂದಿಗೂ, ಎನ್ನೈ என்னை = ನನ್ನನ್ನು, ಇಗೞ್ವಿಲನ್ இகழ்விலன் = ನಿಂದಿಸನು, ಕಾಣ್ಮಿನೇ காண்மினே = ಕಂಡಿರಾ.

ಇಂದಿನಿಂದ ಮೊದಲುಗೊಂಡು ನನ್ನ ಸ್ವಾಮಿಯು ನನ್ನ ಅಭ್ಯುದಯವನ್ನು ನಿಂತು ನಡೆಸುವುದನ್ನು ತನ್ನ ಕೀರ್ತಿಯನ್ನು ನಾನು ಹೊಗಳುವುದನ್ನು ಕೃಪೆಮಾಡಿದ್ದಾನೆ. ಬೆಟ್ಟದಂಥ ಮನೆಗಳುಳ್ಳ ತಿರುಕುರುಕೂರಿನ ಪವಿತ್ರಾತ್ಮನು ನನ್ನನ್ನು ಎಂದೆಂದಿಗೂ ನಿಂದಿಸನು ಕಂಡಿರಾ! (6)

ಮಧುರಕವಿ ಆಳ್ವಾರರು ಹೇಳುತ್ತಾರೆ: ವೇದವಿದ್ಯಾಪಾರಂಗತರೂ ಸನ್ಮಾರ್ಗಪ್ರವರ್ತಕರೂ ಆದ ವೈದಿಕರು ನನ್ನ ವಿಷಯದಲ್ಲಿ ಮಾಡಿದ್ದೇನು? ಎಲ್ಲ ದುರ್ಗುಣಗಳೂ ತುಂಬಿಕೊಂಡವನು ನಾನೆಂದು, ನಾನು ಬಲು ಕೆಟ್ಟವನೆಂದು, ನನ್ನನ್ನು ನಿಂದಿಸಿದರು ಉಪೇಕ್ಷಿಸಿದರು. ನನಗೆ ಮೇಲು ಕೋರಲಿಲ್ಲ. ನನ್ನ ಕೈಬಿಟ್ಟರು. ತಿರುಕುರುಹೂರಿನ ಪವಿತ್ರಾತ್ಮನು ನನ್ನ ಭಾಗ್ಯವಶಾತ್ ನನ್ನ ಸ್ವಾಮಿಯಾದನು. ಆತನು ನನ್ನನ್ನು ತನ್ನ ಶಿಷ್ಯನಾಗಿ ಒಪ್ಪಿದನು. ಎಂದಿಗೂ ಯಾವಾಗಲೂ ಕೂಡ ನನ್ನನ್ನು ನಿಂದಿಸದೆ, ನನ್ನ ಅಭ್ಯುದಯವನ್ನು ಕೋರಿದನು. ನಾನು ಈ ನನ್ನ ಗುರುವಿನ ಕೀರ್ತಿಯನ್ನು ಹೊಗಳದಲು ನನಗೆ ಅನುಮಾನಿಕ [illegible]. ಕಂಡಿರಾ, ಈ ನನ್ನ ಸ್ವಾಮಿಯು [illegible]?

7. கண்டுகொண்டென்னைக் காரிமாறப்பிரான்,
பண்டை வல்வினை பாற்றியருளினான்,
எண்டிசையு மறிய வியம்புகேன்,
ஒண்டமிழ்ச் சடகோபனருளையே.

ಕಣ್ಡುಕೊಣ್ಡೆನ್ನೈಕ್ಕಾರಿಮಾಱಪ್ಪಿರಾನ್,
ಪಣ್ಡೈ ವಲ್ವಿನ್ನೈ ಪಾಱ್ಱಿಯರುಳಿನಾನ್,
ಎಣ್ಡಿಶೈಯು ಮಱಿಯ ವಿಯಮ್ಬುಗೇನ್,
ಒಣ್ಡಮಿೞ್ಚ್ಚಡಗೋಪನರುಳೈಯೇ.

ಕಾರಿ ಮಾಱನ್ காரிமாறன் = ಕಾರಿಯನ ಮಗನೆನಿಸಿದ, ಪಿರಾನ್ பிரான் = ಉದಾರಿಯಾದ ಸ್ವಾಮಿಯು, ಎನ್ನೈ என்னை = ನನ್ನನ್ನು, ಕಣ್ಡು கண்டு = ಕಟಾಕ್ಷಿಸಿ, ಕೊಣ್ಡು கொண்டு = ಸ್ವೀಕರಿಸಿ, ಪಣ್ಡೈ பண்டை = ಬಹುಕಾಲದಿಂದ ಬಂದ, ವಲ್ ವಿನ್ನೈ வல்வினை = ಕಡುಪಾಪಗಳನ್ನೆಲ್ಲಾ, ಪಾಱ್ಱಿ பாற்றி = ನಾಶಗೊಳಿಸಿ, ಅರುಳಿನಾನ್ அருளினான் = ಕೃಪೆಮಾಡಿದನು, ಒಣ್ ஒண் = ಸೊಗಸಾದ, ತಮಿೞ್ தமிழ் = ತಮಿಳಿನ ಕವಿಯಾದ, ಶಡಗೋಪನ್ சடகோபன் = ಶಠಗೋಪನ, ಅರುಳೈಯೇ அருளையே = ಕೃಪೆಯನ್ನೇ, ಎಣ್ ತಿಶೈಯುಮ್ எண்திசையும் = ಎಂಟು ದಿಕ್ಕುಗಳಲ್ಲಿಯೂ, ಅಱಿಯ அறிய = (ಪ್ರಜೆಗಳು) ಅರಿತುಕೊಳ್ಳುವಂತೆ, ಇಯಮ್ಬುಗೇನ್ இயம்புகேன் = ಹೇಳಿ ಪ್ರಸಿದ್ಧಿಪಡಿಸುವಂತೆ ಮಾಡುತ್ತೇನೆ.

ಕಾರಿಯನ್ ಎಂಬಾತನ ಮಗನೆನಿಸಿದ ಉದಾರಿಯಾದ ಸ್ವಾಮಿಯು ನನ್ನನ್ನು ಕಟಾಕ್ಷಿಸಿ ನೋಡಿ, ಸ್ವೀಕರಿಸಿ, ಬಹುಕಾಲದಿಂದ ಬಂದ (ನನ್ನ) ಕಡುಪಾಪಗಳನ್ನೆಲ್ಲಾ ನಾಶಗೊಳಿಸಿ ಕೃಪೆಮಾಡಿದ್ದಾನೆ. ಅಂದವಾದ ತಮಿಳಿನ ಕವಿಯಾದ ಶಠಗೋಪನ ಕೃಪೆಯನ್ನೇ ಎಂಟು ದಿಕ್ಕುಗಳಲ್ಲಿಯೂ ಅರಿತುಕೊಳ್ಳುವಂತೆ ಹೇಳಿ ಪ್ರಸಿದ್ಧಿಪಡಿಸುವಂತೆ ಮಾಡುತ್ತೇನೆ. ⑦

"ಕಾರಿಮಾಱಪ್ಪಿರಾನ್ - காரிமாறப்பிரான்": 'ಕಾರಿ' ಮತ್ತು 'ಮಾಱ' ಎಂಬುವರ ಉದಾರ ಮಗನೀತ ಎರಡು ಅರ್ಥವಾಗುತ್ತದೆ. ಶಠಗೋಪರು ಹುಟ್ಟಿದ್ದು [illegible]. ಕಾರಿ ಎಂಬುವಳು ತಾಯಿ. ಮಾಱ ಎಂಬುವನು ತಂದೆ. ಹೀಗೆ [illegible] ಇದೆ.

"ಕಾರಿ' ಎಂಬುವನೇ 'ಪೊಱ್ಱೋಕಾರಿಯನ್ - பொற்காரியன்' ಎಂತಲೂ, ಅವನೇ ಶಠಗೋಪನ ತಂದೆ ಎಂತಲೂ, ಮತ್ತು "ಮಾಱನ್ - மாறன்" ಎಂದರೆ ಪ್ರಾಪಂಚಿಕ ಸ್ವಭಾವಕ್ಕೆ ವಿರುದ್ಧವಾಗಿ ಬೆಳೆಯುತ್ತಾ ಅದಕ್ಕೆ ಮಾರದೆ ಇರುವವನು - ಅವನೇ ಶಠಗೋಪನು ಎಂತಲೂ ಇನ್ನೊಂದು ವಿವರಣೆ ಇದೆ.

ಶಠಗೋಪನು ಹುಟ್ಟಿದನು. ಕಣ್ಣು ತೆರೆಯಲಿಲ್ಲ. ಹಾಲು ಕುಡಿಯಲಿಲ್ಲ. ಬೆಳವಣಿಗೆ ಸರಿಯಾಗಿತ್ತು. ಹುಟ್ಟಿದ ಹನ್ನೆರಡನೆಯ ದಿನ ಶಿಶುವನ್ನು ದೇವಾಲಯಕ್ಕೆ

ಕೊಂಡೊಯ್ಯುವುದು ಅವರ ಪದ್ಧತಿ. ತಂದೆ ತಾಯಿಗಳು ಹಾಗೆಯೇ ಮಾಡಿದರು. ಭಗವಂ
ತನ ಸಮ್ಮುಖದಲ್ಲಿ ಮಲಗಿಸಿದರು, ಶಿಶುವು ಕಣ್ತೆರೆದು ಸ್ವಾಮಿಯ ಅರ್ಚಾಮೂರ್ತಿಯ
ನ್ನು [illegible] ನೋಡಿತಂತೆ. ಆಗಲೇ ಶಿಶುವು ಜ್ಞಾನಿಯಾಯಿತಂತೆ. ಆದರೆ, ಹಾಲು ಕುಡಿಯದ ಮಲ
[illegible] ಮಗುವನ್ನೇನು ಮಾಡುವುದು? ಆದ್ದರಿಂದ, ದಂಪತಿಗಳು ದೇವಾಲಯದಲ್ಲಿನ ಹುಣಸೆ
ಮರದ ಪೊಟರೆಯಲ್ಲಿ ಅದನ್ನು ಮಲಗಿಸಿ, ಭಗವಂತನನ್ನು ಪ್ರಾರ್ಥಿಸಿ, ಹೊರಟುಹೋದರಂತೆ.
ಅಂತು, ಭಗವತ್ಕಟಾಕ್ಷದಿಂದ ಮಗು ಬೆಳೆಯಿತು, ಶಠಗೋಪರೆನಿಸಿತು. ಅವರು
ಮೌನವಾಗಿ ಧ್ಯಾನಾವಸ್ಥೆಯಲ್ಲಿ ಅಥವಾ ಸಮಾಧಿಸ್ಥಿತಿಯಲ್ಲಿ ಬಹುಕಾಲ ಕಳೆದರು. ಅವ
ರನ್ನು ಬಹುವರ್ಷಗಳನಂತರ ಗುರುತಿಸಿದ ಕೀರ್ತಿ ಮಧುರಕವಿಗಳದು. ಆ ಹುಣಸೆ ಮರದ ಪೊಟರೆ
ಯಲ್ಲಿಯೇ ಅವರನ್ನು ಕಂಡದ್ದಾಯಿತು! ಶಠಗೋಪರು ಸುಂದರವಾದ ತಮಿಳಿನಲ್ಲಿ
ಸಂಸ್ಕೃತ ವೇದಗಳ ಸಾರವನ್ನು, ಎಲ್ಲರಿಗೂ ತಿಳಿಯುವ ಹಾಗೆ, ಸರಳವಾಗಿ ರಚಿಸಿದರು.
ಆ ಪಾಶುರಗಳನ್ನು ಹಾಡಿ ಪ್ರಕಟಗೊಳಿಸಿದವರೂ, ಅವರ ಕೀರ್ತಿಯನ್ನು ಎಲ್ಲೆಲ್ಲೂ
ಹರಡಿದವರೂ ಮಧುರಕವಿಗಳೇ.

ಸದ್ಗುರುವಿನ ಕಟಾಕ್ಷ ಶಿಷ್ಯನ ಮೇಲೆ ಬಿದ್ದರೆ, ಶಿಷ್ಯನು ಪರಿಶುದ್ಧನಾಗುವನು.
ಜನ್ಮಜನ್ಮಾಂತರಗಳಿಂದ ಕೂಡಿ ಬಂದ ಅವನ ಪಾಪರಾಶಿಯೆಲ್ಲ ಸುಟ್ಟು ಭಸ್ಮವಾಗು
ವುದು. ಇದೆಂಥ ಮಹೋಪಕಾರ! ಶಿಷ್ಯನು ಎಷ್ಟು ಕೃತಜ್ಞನಾಗಬೇಕಲ್ಲ! ಶಠಗೋ
ಪರು ಮಧುರಕವಿಗಳನ್ನು ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿದರು. ಗುರುಗಳಿಂದ ತಮ
ಗಾದ ಮಹೋಪಕಾರಕ್ಕೆ ಗುರುಗಳು ರಚಿಸಿದ ಪಾಶುರಗಳನ್ನು ಹಾಡಿ ಪ್ರಕಟಗೊಳಿ
ಸಿ, ಜ್ಞಾನಪ್ರಸಾರ ಮಾಡಿ, ಅವರನ್ನು ಹೊಗಳಿ ಹಾಡಿ, ತಮ್ಮ ಕೃತಜ್ಞತೆಯನ್ನು ವ್ಯಕ್ತ
ಪಡಿಸುತ್ತಾರೆ.

8. அருள்கொண்டாடு மடியவரின்புற,
அருளினானவ்வருமறையின் பொருள்,
அருள்கொண்டாயிரமின்றமிழ் பாடினான்,
அருள்கண்டீரிவ்வுலகினில் மிக்கதே.

ಅರುಳ್ ಕೊಣ್ಡಾಡು ಮಡಿಯವರಿನ್ಬುಱ,
ಅರುಳಿನಾನವ್ವರು ಮಱೈಯಿನ್ ಪೊರುಳ್,
ಅರುಳ್ ಕೊಣ್ಡಾಯಿರಮಿನ್ ತಮಿೞ್ ಪಾಡಿನಾನ್,
ಅರುಳ್ ಕಣ್ಡೀರಿವ್ವುಲಗಿನಿಲ್ ಮಿಕ್ಕದೇ.

ಅರುಳ್ ಕೊಣ್ಡಾಡುಮ್ அருள் கொண்டாடும் = ಭಗವಂತನ ಕೃಪೆಯನ್ನು
ಕೊಂಡಾಡುವ, ಅಡಿಯವರ್ அடியவர் = ಭಕ್ತರುಗಳು, ಇನ್ಬುಱ இன்புற
= ಆನಂದಿಸುವಂತೆ, ಅ ಅರು ಮಱೈಯಿನ್ ಪೊರುಳ್ அ அரு மறையின்
பொருள் = ಆ ಅನರ್ಘ್ಯವಾದ ವೇದಗಳ ಅಂತರಾರ್ಥವನ್ನು, ಅರುಳಿನಾನ್
அருளினான் = ಕೃಪೆಮಾಡಿದವನೂ, ಅರುಳ್ ಕೊಣ್ಡು அருள் கொண்டு =
ಕನಿಕರದಿಂದ, ಇನ್ ತಮಿೞ್ இன் தமிழ் = ಇನಿದಾದ ತಮಿಳಿನಲ್ಲಿ, ಆಯಿರಮ್
ஆயிரம் = ಒಂದು ಸಾವಿರ (ಪಾಶುರ)ವನ್ನು, ಪಾಡಿನಾನ್ பாடினான் = ಹಾಡಿದ
ವನೂ (ಆದವನ). ಅರುಳ್ ಕಣ್ಡೀರ್ அருள் கண்டீர் = ಅನುಗ್ರಹವನ್ನು
ಕಂಡಿರಾ, ಇವ್ವುಲಗಿನಿಲ್ இ உலகினில் = ಈ ಲೋಕದಲ್ಲೇ, ಮಿಕ್ಕದೇ
மிக்கதே = ಬಹಳ ಅತಿಶಯವಾದದ್ದೇ.

ಭಗವಂತನ ಕೃಪೆಯನ್ನು ಕೊಂಡಾಡುವ ಭಕ್ತರುಗಳು ಆನಂದಿಸುವಂತೆ ಅನರ್ಘ್ಯ
ವಾದ ಆ ವೇದಗಳ ಅಂತರಾರ್ಥವನ್ನು ಕೃಪೆಮಾಡಿದವನೂ, ಕನಿಕರದಿಂದ ಇನಿದಾದ
ತಮಿಳಿನಲ್ಲಿ ಒಂದು ಸಾವಿರವನ್ನು (ಪಾಶುರಗಳನ್ನು) ಹಾಡಿದವನೂ, ಆದವನ, ಅನು
ಗ್ರಹವನ್ನು (ಕರುಣೆಯನ್ನು) ಕಂಡಿರಾ! ಈ ಲೋಕದಲ್ಲಿ ಅದು ಬಹಳ ಅತಿಶಯವಾ
ದದ್ದು! ⑧

ಭಕ್ತರಿಗೆ ಭಗವಂತನನ್ನು, ಭಗವಂತನ ಸ್ವಾಭಾವಿಕ ರೂಪ ಗುಣ ವಿಭೂತಿಗಳನ್ನು,
ಅವನ [illegible] ಶಕ್ತಿ ಸಾಧನಗಳನ್ನು, ಭಕ್ತರಲ್ಲಿ ಆತನಲ್ಲಿ ಅವನು ತೋರುತ್ತಿರುವ

4 ರಾಶಿ ಮಾತ್ರ ಅಸಂಖ್ಯಾತ ಉಪರಾಶಿಗಳಿಂದ
ಕೂಡಿದ ವೇದವನ್ನು ಓದಿ, ತಿಳಿದು, ಪಾರಂಗತರಾಗಲು
ಎಲ್ಲರಿಗೂ ಶಕ್ಯವೂ ಇಲ್ಲ, ಸಾಧ್ಯವೂ ಇಲ್ಲ. ಒಂದೇ
ಶಾಖೆಯ ಅಧ್ಯಯನಕ್ಕಾದರೂ 8 ವರ್ಷಗಳ ಶ್ರಮ
ವಹಿಸಿ ಶ್ರದ್ಧಾ ಭಕ್ತಿಯಿಂದ ಗುರುವಿನ ಅನುಗ್ರಹ
ದಿಂದ ಆಗಬೇಕು. ಕೇಳಿದ್ದು ತಿಳಿದವರು ಹೇಳುವುದು-
ಕೇಳಿಸಿಕೊಂಡದ್ದು, ಓದಿದ್ದನ್ನು, ನಿತ್ಯ ಬಾಳಿಗೆ
ಬುದ್ಧಿ ನೀತಿ, ನೀತಿ, ಎಂದು ಹೇಳಿ ಬಿತ್ತರಿಸುವ
[illegible] ಎಂದಾದರೂ [illegible]
[illegible] [illegible]-
ಆದರ್ಶ ಪ್ರಬಂಧ ಪ್ರತಿದಿನ ಅವುಗಳ ಸಾರವನ್ನು
ಎಲ್ಲರಿಗಾಗಿ ತಿಳಿಸಿದೆ.

ಅಗಾಧವಾದ ಕೃತಿಯನ್ನು ಕುರಿತು ಓದುವುದು, ಪ್ರಶಂಸಿಸುವುದು, ಚರ್ಚಿಸುವುದು, ಹಾಡುವುದು ಬಹಳ ಪ್ರಿಯವಾದ ಕೆಲಸ. ಅವರಿಗೆ ಆನಂದವನ್ನುಂಟುಮಾಡುವುದೇ ಭಗವದ್ವಿಷಯ. ಈ ಭಗವದ್ವಿಷಯವನ್ನು ಮುಖ್ಯವಸ್ತುವನ್ನಾಗಿ ಮಾಡಿಕೊಂಡಿರುವ ಜ್ಞಾನಭಂಡಾರ ವೇದ. ವೇದಗಳು ಸಂಸ್ಕೃತ ಭಾಷೆಯಲ್ಲಿವೆ. ವಿಷಯಗಳನ್ನು ವಿವರಿಸಿ ಹೇಳುವ ರೀತಿ ಎಲ್ಲರಿಗೂ ಮನವರಿಕೆಯಾಗುವುದಲ್ಲ. ಭಕ್ತರೆಲ್ಲರೂ ವೇದಗಳನ್ನೋದಿ ಆನಂದಿಸುವುದಕ್ಕಾಗುವುದಿಲ್ಲ. ಭಕ್ತರ ಈ ಕೊರತೆಯನ್ನು ನೀಗಿಸುವುದಕ್ಕಾಗಿಯೇ ಶಠಗೋಪರು ಸಾಟಿಯಿಲ್ಲದ ಆ ವೇದಗಳ ಅಂತರಾರ್ಥವನ್ನು ತಿಳಿಯಾದ, ಎಲ್ಲರಿಗೂ ಅರ್ಥವಾಗುವಂತೆ, ತಮಿಳು ಭಾಷೆಯಲ್ಲಿ ವಿವರಿಸಿ ಹೇಳಿದ್ದಾರೆ. ಭಕ್ತರು ಇದನ್ನು ಓದಿ ಆನಂದಿಸುವಂತಾಗಿದೆ. ಭಗವಂತನ ಕೃತಿಯನ್ನು ಕೊಂಡಾಡುವ ಭಕ್ತರು, ಈ ಕಾರಣದಿಂದ, ಶಠಗೋಪರ ಮಹತ್ಕೃತಿಯನ್ನು ಮೆಚ್ಚಿ ಮೆಚ್ಚಿ ಕೊಂಡಾಡುವಂತಾಗಿದೆ;

ಆಳ್ವಾರರು ಮಧುರವಾದ ತಮಿಳು ಭಾಷೆಯಲ್ಲಿ ಸಾವಿರಕ್ಕೂ ಹೆಚ್ಚಿನ ಪಾಶುರಗಳಲ್ಲಿ ಭಗವಂತನ ಸ್ವರೂಪ, ರೂಪ, ಗುಣ, ವಿಭೂತಿಗಳನ್ನೆಲ್ಲಾ ವಿವರಿಸಿ ಹಾಡಿದ್ದಾರೆ. ಅದನ್ನೆಲ್ಲ ಓದಿ, ಕೇಳಿ, ಹಾಡಿ, ಆನಂದಿಸಲು ಎಲ್ಲರಿಗೂ ಅನುಕೂಲವಾಗಿದೆ. ಆಳ್ವಾರರ ಕರುಣೆಯು ಅನುಗ್ರಹವೂ ಈ ಲೋಕದಲ್ಲೇ ಬಹಳ ಅತಿಶಯವಾದದ್ದು!

9. மிக்கவேதியர் வேதத்தினுட் பொருள்,
நிற்கப்பாடியென் நெஞ்சுள் நிறுத்தினான்,
தக்கசீர்ச்சடகோபனென் நம்பிக்கு, ஆட்
புக்ககாதலடிமைப்பயனன்றே.

ಮಿಕ್ಕ ವೇದಿಯರ್ ವೇದತ್ತಿನುಟ್ ಪೊರುಳ್,
ನಿಱ್ಕಪ್ಪಾಡಿಯೆನ್ ನೆಂಜುಳ್ ನಿಱುತ್ತಿನಾನ್,
ತಕ್ಕಶೀರ್ಚ್ಚಡಗೋಪನೆನ್ ನಂಬಿಕ್ಕು, ಆಟ್
ಪುಕ್ಕಕಾದಲಡಿಮೈಪ್ಪಯನನ್ಱೇ.

ಮಿಕ್ಕ மிக்க = ಶ್ರೇಷ್ಠರಾದ, ವೇದಿಯರ್ வேதியர் = ವೇದವಿತ್ತುಗಳ, ವೇದತ್ತಿನ್ வேதத்தின் = ವೇದಗಳ, ಉಳ್ ಪೊರುಳ್ உள் பொருள் = ಅಂತರಾರ್ಥಗಳನ್ನು, ನಿಱ್ಕ நிற்க = ದೃಢಗೊಳ್ಳುವ ಹಾಗೆ, ಪಾಡಿ பாடி = ಹಾಡಿ, ಎನ್ ನೆಂಜುಳ್ என் நெஞ்சுள் = ನನ್ನ ಮನಸ್ಸಿನಲ್ಲಿ, ನಿಱುತ್ತಿನಾನ್ நிறுத்தினான் = ನಿಲ್ಲಿಸಿದರು, ತಕ್ಕ ಶೀರ್ தக்கசீர் = ತಕ್ಕ ಗುಣೈಶ್ವರ್ಯವುಳ್ಳವರಾದ, ಶಡಗೋಪನ್ சடகோபன் = ಶಠಗೋಪನೆಂಬ, ಎನ್ ನಂಬಿಕ್ಕು என் நம்பிக்கு = ನನ್ನ ಪವಿತ್ರಾತ್ಮರಿಗೆ, ಆಳ್ ಪುಕ್ಕ ஆள் புக்க = ದಾಸ್ಯಕ್ಕೆ ಸಿಕ್ಕಂಥ, ಕಾದಲ್ காதல் = ಪ್ರೇಮವು, ಅನ್ಱೇ அன்றே = ಅಷ್ಟೇ, ಅಡಿಮೈಪ್ಪಯನ್ அடிமைப்பயன் = ಅವರಿಗೆ ದಾಸ್ಯದ ಪ್ರಯುಕ್ತವಾಯಿತು.

ಶ್ರೇಷ್ಠರಾದ ವೇದವಿತ್ತುಗಳ ವೇದಗಳ ಅಂತರಾರ್ಥವನ್ನು ದೃಢಗೊಳ್ಳುವಂತೆ ಹಾಡಿ, ನನ್ನ ಮನಸ್ಸಿನಲ್ಲಿ ನಿಲ್ಲಿಸಿದರು. ತಕ್ಕ ಗುಣೈಶ್ವರ್ಯವುಳ್ಳವರಾದ ಶಠಗೋಪರೆಂಬ ನನ್ನ ಪವಿತ್ರಾತ್ಮರಲ್ಲಿ ದಾಸ್ಯಮಾಡತಕ್ಕ ಪ್ರೇಮವುಂಟಾದದ್ದರಿಂದಲೇ ಅವರಲ್ಲಿ ದಾಸ್ಯದ ಪ್ರಯುಕ್ತ ನಡೆಸಿದೆ. ⑨

ಮಧುರಕವಿ ಆಳ್ವಾರರು ಹೇಳುತ್ತಾರೆ: ಪರಮ ಶ್ರೇಷ್ಠರಾದ ವೇದಪಂಡಿತರು ಹಾಡುವ ವೇದಗಳ ಅಂತರಾರ್ಥವೆಲ್ಲ ಚೆನ್ನಾಗಿ ಮನದಲ್ಲಿ ನಾಟುವಂತೆ ಶಠಗೋಪರು ಆ ವಿಷಯಗಳನ್ನು ಮಧುರವಾದ ತಮಿಳಿನಲ್ಲಿ ಹಾಡಿದರು. ಅದು ನನ್ನ ಹೃದಯದಲ್ಲಿ ನೆಲೆ

ಗುರು ಪರಂ ಪರಬ್ರಹ್ಮನ ಸಮಾನ [illegible]
ಶಿಷ್ಯ ಶಿಷ್ಯೋತ್ತಮ ಪರಂಪರೆಯಾಗಿ - ಇದು ಗುರು
ಗುರು - ಶಿಷ್ಯನನ್ನು ಆರಿಸುವುದರಲ್ಲೂ, ಶಿಷ್ಯ
ಗುರು ಹುಡುಕಿ ಕೊಂಡು ಹೋಗುವುದರಲ್ಲೂ
ಸಹಜ ಸಂಬಂಧ 'ಅವಿನಾಭಾವ ಸಂಬಂಧ' ಇದೇ ಎಂ
ಬುದಕ್ಕೆ ಅವರ ಜೀವನ ಚರಿತ್ರೆಗಳಿಂದ ಸ್ಪಷ್ಟ-
E.g. - ರಾಮಕೃಷ್ಣ ಪರಮಹಂಸ - ನರೇಂದ್ರ (ವಿವೇಕಾನಂದ)
ಗೋವಿಂದಪಾದರು - ಶಂಕರಾಚಾರ್ಯರು -
ರಾಮಾನುಜರು - ಕೂರೇಶರು - ಮಹಾಪೂರ್ಣರು
ವ್ಯಾಸರಾಯರು - ಕನಕದಾಸರು -

ಬದ್ಧ ಶಿಷ್ಯನ ಹೇಳಿಕೆ -
Gandhiji selection of Bhave ವಿನೋಬಾ
& Nehru's " of Hardikar ಡಾಕ್ಟರ್
can't be reasoned out -
ಇನ್ನ ನಮ್ಮ ದೇಶ ಅವರ ತೀರ್ಮಾನ ಸಮರ್ಥನಾರದು
ಹೇಳಬೇಕಾದರೆ ವ್ಯಕ್ತಿತ್ವ ಬೇರೆ ಸಂಸ್ಕೃತಿಯಿಂದ ಬಂದ
ಪಾಂಡಿತ್ಯ ಕಾಣುತ್ತೆ -
ಹೀಗೆ ಜಗದ್ಗುರುಗಳು, ಧರ್ಮ ಪ್ರವರ್ತಕರು
ಆದರೆ ವ್ಯಕ್ತಿತ್ವಗಳಲ್ಲಿ ಯಾವ ಭಾವನೆ

ಇಲ್ಲಿ ಶಿಷ್ಯರು ಗುರುಗಳಲ್ಲಿ ನಂಬಿಕೆ ಅಲ್ಲ
ಗುರುಗಳು ಶಿಷ್ಯರು [illegible] ವ್ಯಕ್ತಿತ್ವ ಬೇರೆಯಾದುದು -
ನಿರಂತರ [illegible] ವ್ಯಕ್ತಿತ್ವ ಬೇರೆಯಾದುದು -
ಹಿರಿಯ ಸತ್ಯ ಪರಿಶೋಧನೆ, ಸತ್ಯ ಸಂಕಲ್ಪನಾದ
ಇವರು ಹೀಗಾಗಿಯೇ ಅಲ್ಲವೇ, ಸ್ವದೇಶಭಕ್ತಿ ಪ್ರಸಕ್ತಿ -?

ನಂಬಿರು. ಶಠಗೋಪರಲ್ಲಿ ಅಪಾರವಾದ ಸದ್ಗುಣ ಸಂಪತ್ತಿದೆ. ಈ ಎರಡು ಕಾರಣಗಳಿಂದ ನಾನು ಅವರಲ್ಲಿ ಪಾದಸೇವಕನಾಗಬೇಕೆಂಬ ಆಸೆ ಹುಟ್ಟಿತು. ಆ ಕ್ಷಣದಿಂದಲೇ ನಾನು ಅವರ ಪಾದಸೇವೆಗೆ ಪ್ರಯತ್ನಿಸಿದೆ.

ಗುರುವು ಶಿಷ್ಯನನ್ನು ಆರಿಸಿಕೊಳ್ಳುವುದಕ್ಕೆ ಮುಂಚಿತವಾಗಿ, ಅವನು ತನಗೆ ತಕ್ಕವನೇ, ಯೋಗ್ಯ ಗುಣವುಳ್ಳವನೇ, ತಾನು ಅವನಿಗೆ ನಿರ್ವಂಚನೆಯಿಂದ ಮನಬಿಚ್ಚಿ ಕಲಿಸಬಹುದೇ, ಅದರಿಂದ ಅವನಿಗೆ ಅಭ್ಯುದಯವಾಗುವುದೇ - ಎಂದು ಮುಂಚಾಗಿ ಶಿಷ್ಯನ ಗುಣಾವಗುಣಗಳನ್ನು ತುಲನ ಮಾಡುವುದು ಸಹಜವಷ್ಟೆ. ಮಧುರಕವಿಗಳು ಹೇಳುವ ರೀತಿಯಲ್ಲಿ, ಗುರುವನ್ನು ಶಿಷ್ಯನಾದವನು ಹಾಗೆಯೇ ತುಲನಮಾಡಿ ನೋಡಬೇಕು. ತನ್ನ ಗುರುವಾಗ ತಕ್ಕವನು ತನಗೆ ಬರುವ ಶಂಕೆ ಸಂಶಯಗಳನ್ನು ಸರಿಯಾಗಿ ಬಿಡಿಸಿ ಬಗೆಹರಿಸಬಲ್ಲನೇ? ತಾನು ಆತನ ದಾಸ್ಯ ನಡೆಸಲು ಆತ ಸದ್ಗುಣ ಸಂಪನ್ನನಾಗಿ, ಶ್ರೇಷ್ಠನಾಗಿದ್ದಾನೆಯೇ? ಎಂದು ಮುಂಚಾಗಿ ಯೋಚಿಸಿ, ತೀರ್ಮಾನಕ್ಕೆ ಬರಬೇಕು. ಗುರುವಿನಲ್ಲಿ ಶಿಷ್ಯನಿಗೆ ನಿಜವಾಗಿ, ಹೃತ್ಪೂರ್ವಕವಾಗಿ, ಭಕ್ತಿ ಗೌರವಗಳು ಅಂಕುರಿಸುತ್ತವೆಯೋ ಆ ಗುರುವನ್ನು ಬಿಡದೆ ಆಶ್ರಯಿಸಬೇಕು.

ಮಧುರಕವಿಗಳಿಗಾದ ಅನುಭವವೇ ಇಲ್ಲಿ ಪ್ರಕಟವಾಗಿದೆ. ಅವರು ಗುರುವಿನಾಗಿ ಹುಡುಕುತ್ತಿದ್ದರಷ್ಟೆ. ಜ್ಞಾನದೀಪದ ಜ್ಯೋತಿಯಿಂದಲೇ, ಶಠಗೋಪರಿಂದ ಅವರ ಪ್ರಶ್ನೆಗೆ ತಕ್ಕ ಉತ್ತರ ದೊರೆತ ಕ್ಷಣದಿಂದಲೇ ಅವರು ಶಠಗೋಪರ ಪಾದಸೇವಕರಾದರಲ್ಲವೇ?

10. பயனன்றாகிலும் பாங்கலராகிலும்,
செயல்நன்றாகத் திருத்திப்பணிகொள்வான்,
குயில்நின்றால் பொழில்சூழ் குருகூர்நம்பி,
முயல்கின்றேனுன்றன் மொய்கழற்கன்பையே.

ಪಯನನ್ಱಾಗಿಲುಮ್ ಪಾಙ್ಗಲರಾಗಿಲುಮ್,
ಶೆಯಲ್‍ನನ್ಱಾಗ ತ್ತಿರುತ್ತಿಪ್ಪಣಿಕೊಳ್ವಾನ್,
ಕುಯಿಲ್‍ನಿನ್ಱಾಲ್ ಪೊೞಿಲ್‍ಶೂೞ್ ಕುರುಗೂರ್ ನಮ್ಬಿ,
ಮುಯಲ್ಗಿನ್ಱೇನುನ್ಱನ್ ಮೊಯ್‍ಕೞಱ್ಕನ್ಬೈಯೇ.

ಪಯನ್ ಅನ್ಱು பயன் அன்று = ಫಲವಿಲ್ಲ, ಆಗಿಲುಮ್ ஆகிலும் = ಆದರೂ, ಪಾಙ್ಗು ಅಲರ್ பாங்கு அலர் = ಒಪ್ಪಿಗೆ ಇಲ್ಲದವರು, ಆಗಿಲುಮ್ ஆகிலும் = ಆದರೂ, ಶೆಯಲ್ செயல் = ನನ್ನ ಅನುಷ್ಠಾನಗಳನ್ನು, ನನ್ಱಾಗ நன்றாக = ಚೆನ್ನಾಗಿ, ತಿರುತ್ತಿ திருத்தி = ತಿದ್ದಿ, ಪಣಿಕೊಳ್ವಾನ್ பணிகொள்வான் = ಸೇವೆಗೊಳ್ಳುವುದಕ್ಕಾಗಿ, ಕುಯಿಲ್ ನಿನ್ಱು குயில் நின்று = ಕೋಗಿಲೆಗಳು ತಂಗಿ, ಆಲ್ ஆல் = ಸದ್ದು ಮಾಡುವ, ಪೊೞಿಲ್ ಶೂೞ್ பொழில் சூழ் = ತೋಪುಗಳಿಂದ ಸುತ್ತುವರಿದ, ಕುರುಗೂರ್ ನಮ್ಬಿ குருகூர் நம்பி = ಕುರುಗೂರಿನ ಪ್ರಸಿದ್ಧ ಪುರುಷನೇ, ಉನ್ಱನ್ உன்றன் (உன் தன்) = ನಿನ್ನ, ಮೊಯ್‍ಕೞಱ್ಕು மொய் கழற்கு = ಶ್ರೇಷ್ಠವಾದ ತಿರುವಡಿಗ[illegible], ಅನ್ಬೈಯೇ அன்பையே = ಭಕ್ತಿ ಗೌರವಗಳು ಅಂಕುರಿಸುವುದಕ್ಕಾಗಿಯೇ, ಮುಯಲ್ಗಿನ್ಱೇನ್ முயல்கின்றேன் = ಪ್ರಯತ್ನಿಸುತ್ತಿದ್ದೇನೆ.

ಫಲವಿಲ್ಲದಿದ್ದರೂ ಒಪ್ಪಿಗೆಯಿಲ್ಲವಾದರೂ, ನನ್ನ ಅನುಷ್ಠಾನಗಳನ್ನು ಚೆನ್ನಾಗಿ ತಿದ್ದಿ ಸೇವೆಗೊಳ್ಳುವುದಕ್ಕಾಗಿ, ಕೋಗಿಲೆಗಳು ಸದ್ದು ಮಾಡುವ ತೋಪುಗಳಿಂದ ಸುತ್ತುವರಿದ ಕುರುಗೂರಿನ ಪ್ರಸಿದ್ಧ ಪುರುಷನೇ, ನಿನ್ನ ಶ್ರೇಷ್ಠವಾದ ತಿರುವಡಿಗಳಲ್ಲಿ, ಭಕ್ತಿ ಗೌರವಗಳು ಅಂಕುರಿಸುವುದಕ್ಕಾಗಿ ಪ್ರಯತ್ನಿಸುತ್ತಿದ್ದೇನೆ. ⑩

ಶಿಷ್ಯನನ್ನು ಗುರುವೂ ಗುರುವನ್ನು ಶಿಷ್ಯನೂ ಪರಸ್ಪರ ಒಪ್ಪಿ ಸೇರಿದರೆ, ಆ ಗುರು-ಶಿಷ್ಯ ಸಂಬಂಧವು ನಿಕಟವಾಗಿ, ಅದ್ವಿತೀಯವಾದ ಬಾಂಧವ್ಯವಾಗಿ ಬೆಳೆಯುತ್ತದೆ. ಇಬ್ಬರಿಗೂ ಇದರಿಂದ ಪ್ರಯೋಜನವಿದೆ. ತನ್ನಲ್ಲಿರುವ ಅಮೂಲ್ಯವಾದ ವಿದ್ಯಾಧನವನ್ನು ಸತ್ಪಾತ್ರದಾನ ಮಾಡಿದೆನಲ್ಲಾ ಎಂಬ ತೃಪ್ತಿಯೂ ಸಂತೋಷವೂ ಗುರುವಿಗೆ. ತನ್ನ ಸಂದೇಹಗಳಿಗೆ ಸ್ವಲ್ಪವೂ ಆಸ್ಪದವಿಲ್ಲದಂತೆ ತಾನು ತಿಳಿಯಬೇಕಾದ್ದನ್ನು ಚೆನ್ನಾಗಿ ತಿಳಿದೆನಲ್ಲ, ಅಲ್ಲದೆ, ಅದರ ಅನುಷ್ಠಾನದಲ್ಲಿಯೂ ಸ್ವಲ್ಪವೂ ದಾರಿ ತಪ್ಪದಂತೆ ಗುರುವು ತಿಳಿಸಿ ಕೊಟ್ಟರಲ್ಲ ಎಂಬ ಸಂತೋಷವೂ, ತನ್ನ ಗುರುವಿನ ಬಗ್ಗೆ [illegible] ಹೆಮ್ಮೆಯೂ ಶಿಷ್ಯನಿಗೆ.

ಗುರುವಿನಲ್ಲಿ ಎರಡು ಬಗೆಯೆಂದು ತಿಳಿದವರು ಹೇಳುತ್ತಾರೆ. ಶಿಷ್ಯನನ್ನಾಗಿ ಮಾಡಿಕೊಳ್ಳುವುದಕ್ಕೆ ಮುಂಚೆ, ಗುರುವು ಅವನನ್ನು ಚೆನ್ನಾಗಿ ದುಡಿಸಿ, ಕಷ್ಟಕ್ಕೆ ಈಡು ಮಾಡಿ, ಪರೀಕ್ಷಿಸಿ, ಎಲ್ಲ ರೀತಿಯಲ್ಲೂ ಅವನು ಯೋಗ್ಯನೆಂದು ತಿಳಿದ ಬಳಿಕಲೇ ಪ್ರಸನ್ನನಾಗಿ ಅವನಿಗೆ ತಿಳಿಸುವುದು. ಈ ಬಗೆಯ ಗುರುವನ್ನು "ಅನುವೃತ್ತಿ ಪ್ರಸನ್ನಾಚಾರ್ಯ" ಎನ್ನುತ್ತಾರೆ. ತನ್ನಲ್ಲಿಗೆ ಬಂದ ಶಿಷ್ಯನನ್ನು ನೋಡಿದ ಮಾತ್ರದಿಂದಲೇ ಅವನ ಅಂತರಂಗವನ್ನು ಗ್ರಹಿಸಿ, ಅವನಲ್ಲಿ ಕೃಪೆದೋರುವವನು ಇನ್ನೊಂದು ಬಗೆಯ ಗುರು. ಬಂದ ಶಿಷ್ಯನಿಗೆ ಗುರುಸೇವೆ ಮಾಡಲು ಇಷ್ಟವಿಲ್ಲವಾದರೂ, ಅನುಗ್ರಹಿಸಿ, ತನ್ನ ಸೇವೆ ಮಾಡುವುದಕ್ಕೆ ಸಮ್ಮತಿಸದಿದ್ದರೂ ಸಹ, ಅವನನ್ನು ಶಿಷ್ಯನು ತಾನಾಗಿ ಸಂತೋಷಪಡುವವನು. ಗುರುವು ಅದಕ್ಕೆ ಅವಕಾಶವನ್ನುಂಟು ಮಾಡಿದರೆ, ಶಿಷ್ಯನು ಗುರುವು ಬೇಡ ಬೇಡವೆಂದರೂ ಸಹ ಬಿಡದೆ ಅವನನ್ನಾಶ್ರಯಿಸಿ, ಸೇವೆ ಮಾಡಿ, ಗುರುವಿನ ಕೃಪೆಯನ್ನು ಪಡೆಯಬಲ್ಲನು. ಇಂಥ ಗುರುವನ್ನು 'ಕೃಪಾಮಾತ್ರ ಪ್ರಸನ್ನಾಚಾರ್ಯ" ಎನ್ನುತ್ತಾರೆ. ಮಧುರಕವಿಗಳಿಗೆ ದೊರೆತ ಗುರುವಾದ ಶಠಗೋಪರು ಎರಡನೆಯ ವರ್ಗಕ್ಕೆ ಸೇರಿದವರು — ಕೃಪಾಮಾತ್ರ ಪ್ರಸನ್ನಾಚಾರ್ಯರು.

ಮಧುರಕವಿ ಆಳ್ವಾರರು ಹೇಳುತ್ತಾರೆ: ಈ ಶಿಷ್ಯನಿಂದ ನಿಮಗೆ ಯಾವ ವಿಧವಾದ ಸೇವೆಯ ಫಲವಿಲ್ಲವಾದರೂ, ನನ್ನನ್ನು ನಿಮ್ಮ ಶಿಷ್ಯನನ್ನಾಗಿ ಸ್ವೀಕರಿಸುವುದಕ್ಕೆ ನಿಮಗೆ ಒಪ್ಪಿಗೆಯಿಲ್ಲದಿದ್ದರೂ, ನನ್ನ ಮೇಲ್ಮೆಗಾಗಿಯೇ ನಾನು ನಿಮ್ಮನ್ನು ಸೇವೆ ಮಾಡಬಯಸುತ್ತೇನೆ. ಇದರಿಂದ ನನ್ನ ಅನುಷ್ಠಾನಗಳು ಶುದ್ಧಿಗೊಳ್ಳುವುವು. ನನ್ನ ಸ್ವಾರ್ಥಕ್ಕಾಗಿಯೇ ನಾನು ನಿಮ್ಮ ಶ್ರೇಷ್ಠ ತಿರುವಡಿಗಳ ಸೇವೆಯಲ್ಲಿ ತೊಡಗುತ್ತೇನೆ. ನನ್ನ ಸ್ವಪ್ರಯತ್ನದಿಂದಲಾದರೂ ನಿಮ್ಮ ದಿವ್ಯ ತಿರುವಡಿಗಳಲ್ಲಿ ನನಗೆ ಭಕ್ತಿ ಗೌರವಗಳು ದೊರಕಲಿ!

11. அன்பன்றன்னை யடைந்தவர்கட்கெல்லாம்,
அன்பன், தென்குருகூர் நகர்நம்பிக்கு,
அன்பனாய் மதுரகவி சொன்ன சொல்
நம்புவார்பதி, வைகுந்தம் காண்மினே.

ಅನ್ಬನ್ಱನ್ನೈ ಯಡೈನ್ದವರ್ಗಟ್ಕೆಲ್ಲಾಮ್,
ಅನ್ಬನ್, ತೆನ್ ಕುರುಗೂರ್ ನಗರ್ ನಂಬಿಕ್ಕು,
ಅನ್ಬನಾಯ್ ಮಧುರಕವಿ ಶೊನ್ನ ಶೊಲ್
ನಂಬುವಾರ್ ಪದಿ, ವೈಕುನ್ದಮ್ ಕಾಣ್ಮಿನೇ.

ಅನ್ಬನ್ ತನ್ನೈ அன்பன் தன்னை = ಭಕ್ತರಲ್ಲಿ ಕೃಪೆಯುಳ್ಳ ಭಗವಂತನನ್ನು, ಅಡೈನ್ದವರ್ಗಟ್ಕೆಲ್ಲಾಮ್ அடைந்தவர்கட்கெல்லாம் = ಆಶ್ರಯಿಸಿದವರೆಲ್ಲರಲ್ಲಿಯೂ, ಭಕ್ತಿಯುಳ್ಳ, ಅನ್ಬನ್ அன்பன் = ಭಕ್ತಿಯುಳ್ಳವನಾದ, ತೆನ್ தென் = ಸೊಬಗಿನ, ಕುರುಗೂರ್ ನಗರ್ ನಂಬಿಕ್ಕು குருகூர் நகர் நம்பிக்கு = ಕುರ್ಕೂ

ಲನ ಪ್ರಸಿದ್ಧ ಪುರುಷನಿಗೆ, ಅನ್ಬನ ಆಯ್ அன்பன் ஆய் = ಭಕ್ತನಾಗಿರುವ, ಮದುರಕವಿ மதுரகவி = ಮಧುರಕವಿಯು, ಶೊನ್ನ ಶೊಲ್ சொன்ன சொல் = ಕೃತಿಮಾಡಿದ ಪಾಶುರಗಳನ್ನು, ನಮ್ಬುವಾರ್ நம்புவார் = ನಂಬುವವರು, ಪದಿ பதி = ಶಾಶ್ವತವಾಗಿ ನೆಲಸುವುದು, ವೈಕುನ್ದಮ್ ಕಾಣ್ಮಿನೇ வைகுந்தம் காண்மினே = ವೈಕುಂಠವೇ ಎಂದು ಕಾಣಿರಿ.

ಭಕ್ತರಲ್ಲಿ ಕೃಪೆಯುಳ್ಳ ಭಗವಂತನನ್ನು ಆಶ್ರಯಿಸಿದವರೆಲ್ಲರಲ್ಲಿಯೂ ಭಕ್ತಿಯುಳ್ಳವನಾದ ದೆಂಬಾಗದ ಕುರುಕೂರು ನಗರದ ಪ್ರಸಿದ್ಧ ಪುರುಷನಿಗೆ ಭಕ್ತನಾಗಿರುವ ಮಧುರಕವಿಯು ಕೃತಿಮಾಡಿದ ಪಾಶುರಗಳನ್ನು ನಂಬುವವರು ಶಾಶ್ವತವಾಗಿ ನೆಲಸುವುದು ವೈಕುಂಠವೇ! ⑪

ಭಗವಂತನು ಕೃಪಾಸಾಗರ. ಅವನ ಕೃಪೆಯನ್ನು ಹೊಂದಿ, ಅವನನ್ನು ಆಶ್ರಯಿಸಿದವರೆಲ್ಲರೂ ಅವನ ಅನನ್ಯ ಭಕ್ತರೇ. ಈ ಭಕ್ತರನ್ನು ಭಾಗವತರು ಎಂದೂ ಕರೆಯುವುದು ವಾಡಿಕೆ. ಈ ಭಾಗವತರನ್ನು ಆಶ್ರಯಿಸಿ, ಅವರ ಮೂಲಕ ಭಗವಂತನಲ್ಲಿ ಭಕ್ತಿ ಮಾಡುವವರೂ ಭಕ್ತರೇ. ಈ ಭಕ್ತರು ಆಶ್ರಯಿಸಿರುವ ಗುರುಪಾದ ಭಾಗವತರೇ ಅವರ ಪ್ರತ್ಯಕ್ಷ ಭಗವತ್ಸ್ವರೂಪ. ಗುರುವನ್ನು ತಮ್ಮ ಸರ್ವಸ್ವವೆಂದು ಭಾವಿಸಿ, ಗುರುವಿನಲ್ಲಿ ಶರಣಾಗಿ, ಗುರುಚರಣದಲ್ಲೇ ನಿರತರಾಗಿ, ಗುರುನಿಷ್ಠೆಯನ್ನು ಅನನ್ಯವಾಗಿ ಪಾಲಿಸಿಕೊಂಡು ಬಂದು ಅವರು ಭಗವಂತನ ಪೂರ್ಣಾನುಗ್ರಹಕ್ಕೆ ಪಾತ್ರರಾಗುತ್ತಾರೆ.

ಶಠಗೋಪರು ಪರಮಜ್ಞಾನಿಯಾದ ಭಾಗವತರು. ಅವರನ್ನು ತಮ್ಮ ಗುರುವನ್ನಾಗಿ ವರಿಸಿ, ಅವರ ನಿಷ್ಠೆಯಲ್ಲೇ ತಮ್ಮ ಜೀವವನ್ನು ಸವೆಸಿದವರು ಮಧುರಕವಿಗಳು. ಅವರು ರಚಿಸಿದ "ಕಣ್ಣಿನುಣ್ ಶಿರುತ್ತಾಂಬು" ಎಂಬ ಒಂದೇ ಒಂದು ಪ್ರಬಂಧದಲ್ಲಿ ಅವರು ಹೊಗಳಿ ಹಾಡಿರುವುದು ಗುರುನಿಷ್ಠೆಯೊಂದನ್ನೇ. ಅವರ ಮಾತಿನಲ್ಲಿ ಭಗವಂತನ ಕೃಪೆಗಿಂತಲೂ ಶಿಷ್ಯನಿಗೆ ಗುರುಕೃಪೆಯೇ ಹಿರಿದು. ಅದಕ್ಕಾಗಿಯೇ ಅವನು ಪ್ರಯತ್ನಿಸಬೇಕು. ಗುರುವಿನ ಕಟಾಕ್ಷಕ್ಕೆ ಪಾತ್ರನಾಗಬೇಕು. ಹೀಗೆ ಮಾಡುವುದರಿಂದ ಅವನು ಭಗವತ್ಕೃಪೆಗೆ ಪಾತ್ರನಾಗಿ ಶಾಶ್ವತವಾಗಿ ವೈಕುಂಠವಾಸಿಯೇ ಆಗುತ್ತಾನೆ. ಇದಕ್ಕಿಂತ ಮನುಷ್ಯನು ಸಾಧಿಸಬೇಕಾದದ್ದೇನಿದೆ?

— o —

1976. "ಆಳ್ವಾರ್ ತಿರುವಡಿಗಳೇ ಶರಣಮ್"

ಆಳ್ವಾರರ ತಿರುವಡಿಗಳೇ ಶರಣು.

— o —